ವಿಜಯಪುರ | ಸಂಪುಟ 04 | ಸಂಚಿಕೆ 175 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily


ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಗುರುವಾರ, ಸೆಪ್ಟೆಂಬರ್, 03, 2026



"ಬಸವಣ್ಣನ ಜನ್ಮಸ್ಥಳ ಬಸವನ ಬಾಗೇವಾಡಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿ ಅಭಿವೃದ್ಧಿಗೆ ಅಗತ್ಯ ಅನುದಾನ ಒದಗಿಸಬೇಕು. ಬಸವ ಕಲ್ಯಾಣ ಹಾಗೂ ಕೂಡಲ ಸಂಗಮಕ್ಕೆ ನೀಡುವ ಮಹತ್ವವನ್ನು ಬಸವನ ಬಾಗೇವಾಡಿಗೂ ನೀಡಬೇಕು."

■ ಶಿವಾನಂದ ಪಾಟೀಲ
ಶಾಸಕರು, ಬಸವನ ಬಾಗೇವಾಡಿ

# ವಿಜಯಪುರ ಜಿಲ್ಲೆ ಬರಗಾಲ ಘೋಷಣೆಗೆ ಆಗ್ರಹಿಸಿ ಅನಿರ್ದಿಷ್ಟ ಹೋರಾಟ

## ಸಂಪೂರ್ಣ ಕೈಕೊಟ್ಟ ಮಳೆ, ಹಸಿರಾಗದ ಇಳೆ | ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಅನಿರ್ದಿಷ್ಟ ಹೋರಾಟ ಪ್ರಾರಂಭ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯಲ್ಲಿ 2026-27 ನೇ ಸಾಲಿನಲ್ಲಿ ಮಳೆ ಸಂಪೂರ್ಣ ಕೈಕೊಟ್ಟಿರುವುದನ್ನು ತಿಳಿದಿದ್ದರೂ ಕೇವಲ 3 ತಾಲೂಕುಗಳನ್ನು ಬರಗಾಲವೆಂದು ಪರಿಗಣಿಸಿ ಉಳಿದ 10 ತಾಲೂಕುಗಳನ್ನು ಕೈ ಬಿಡಲಾಗಿದ್ದು ಕೂಡಲೇ ಜಿಲ್ಲೆಯ 13 ತಾಲೂಕುಗಳನ್ನು ಬರಗಾಲ ಎಂದು ಘೋಷಣೆ ಮಾಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಬುಧವಾರದಿಂದ ಅನಿರ್ದಿಷ್ಟ ಹೋರಾಟ ಪ್ರಾರಂಭ ಮಾಡಲಾಯಿತು.

ನಗರದ ಗಾಂಧಿ ವೃತ್ತದಿಂದ ಮೆರೆವಣಿಗೆ ಮೂಲಕ ಅಂಬೇಡ್ಕರ ವೃತ್ತದ ಹಿಂದುಗಡೆ ಹಾಕಿರುವ ಟೆಂಟಿನಲ್ಲಿ ಹೋರಾಟ ಪ್ರಾರಂಭ ಮಾಡಿದರು.

ಈ ವೇಳೆ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹ ಮಾಡಲಾಯಿತು.




### ರೈತರ ಬೇಡಿಕೆಗಳು

**ಜಿಲ್ಲೆಯ 13 ತಾಲೂಕುಗಳನ್ನು ಬರಗಾಲವೆಂದು ಘೋಷಣೆ ಮಾಡಬೇಕು.**
**ಪ್ರತಿ ಎಕರೆಗೆ 50 ಸಾವಿರ ಬರ ಪರಿಹಾರ ನೀಡಬೇಕು**
**ಬೆಳೆವಿಮೆ ತುಂಬಿರುವ ರೈತರಿಗೆ 50% ಮಧ್ಯಂತರ ವಿಮೆ ಕೂಡಲೇ ಬಿಡುಗಡೆ ಮಾಡಬೇಕು.**
**ಜಿಲ್ಲೆಯ ಎಲ್ಲಾ ಹಳ್ಳ, ಕೊಳ್ಳ, ಕೆರೆ ಕಾಲುವೆಗಳನ್ನು ಭರ್ತಿ ಮಾಡುಬೇಕು.**
**ಜಿಲ್ಲೆಯ ಎಲ್ಲಾ ದನಕರುಗಳಿಗೆ ಮೇವಿನ ವ್ಯವಸ್ಥೆ ಮಾಡಬೇಕು.**
**ಜಿಲ್ಲೆಯ ನಿರುದ್ಯೋಗಿ ಯುವಕರಿಗೆ ಕೆಲಸ ಹಚ್ಚಿಕೊಡಬೇಕು.**

ಜಿಲ್ಲೆಯ ಎಲ್ಲ ಶಾಸಕರು ರಾಜೀನಾಮೆ ಕೊಡಲು ಆಗ್ರಹ

ತಮ್ಮ ಎಲ್ಲಾ ಬೇಡಿಕೆಗಳನ್ನು ಈಡೇರಿಸುವವರೆಗೂ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಮಾಡಲಾಗುವುದು. ಆದ್ದರಿಂದ ಕೂಡಲೇ ಜಿಲ್ಲಾಡಳಿತ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಬರಗಾಲ ಜಿಲ್ಲೆ ಎಂದು ಘೋಷಣೆ ಮಾಡಬೇಕು. ಇಲ್ಲವೇ ಜಿಲ್ಲೆಯ ಎಲ್ಲಾ 8 ಶಾಸಕರು ರಾಜೀನಾಮೆ ಕೊಟ್ಟು ನಮ್ಮ ಜೊತೆಗೆ ಬಂದು ಹೋರಾಟದಲ್ಲಿ ಕೂಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಈ ವೇಳೆ ನಾದ ಕೆ. ಡಿ ಗ್ರಾಮದ ಮಠಾಧಿಶರಾದ ಶಿವಾನಂದ ಹಿರೇಮಠ, ರಾಜ್ಯ ಉಪಾಧ್ಯಕ್ಷರಾದ ಕಲ್ಲು ಸೊನ್ನದ, ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ, ಮುಖಂಡರಾದ ಬಸನಗೌಡ ಪಾಟೀಲ ಯಾಡ್ಯಾಪೂರ, ರಾಮನಗೌಡ ಪಾಟೀಲ, ಶ್ರೀಶೈಲ್ ಮುಳಜಿ, ಅನಮೇಶ ಜಮಖಂಡಿ, ಸುರೇಶ ಕಿರೆಸೂರ್, ಮಾಳು ಪೂಜಾರಿ, ಸಂಗಪ್ಪ ಟಕ್ಕೆ, ಈರಪ್ಪ ಕುಳೆಕುಮಟಾಗಿ, ಶ್ರೀಶೈಲ ವಾಲಿಕಾರ, ಎಸ್. ಟಿ. ಪಾಟೀಲ, ಶಿವಾನಂದ ಹಿರೇಮಠ, ಶಾನೂರ್ ನಂದರಗಿ, ಸಂಗೀತಾ ರಾಠೋಡ, ಜಗದೇವಿ ಬಿರಾದಾರ, ಲಕ್ಷ್ಮಿ ಬಿರಾದಾರ, ಪ್ರಶಾಂತ ಭೂಸಾನೂರ, ಚೆನ್ನಮ್ಮ ಮೈತ್ರಿ ಸೇರಿದಂತೆ ನೂರಾರು ರೈತರಿದ್ದರು.

## ಜಲನಾಯಕನಿಗೆ ಹೂವು-ಕಾಯಿ ನೀಡಿ ಕೃತಜ್ಞತೆ ಸಲ್ಲಿಸಿದ ರೈತ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಬರಡು ಭೂಮಿಗೆ ನೀರು ಹರಿಸಿದ ಜಲನಾಯಕನನ್ನು ತೋಟಕ್ಕೆ ಕರೆದೊಯ್ದ ರೈತ ತಾನು ಬೆಳೆದ ಹೂವು ಮತ್ತು ತೆಂಗಿನಕಾಯಿಯನ್ನು ನೀಡಿ ಕೃತಜ್ಞತೆ ಸಲ್ಲಿಸಿದ ಹೃದಯಸ್ಪರ್ಶಿ ಘಟನೆ ಮಂಗಳವಾರ ತಿಕೋಟಾ ತಾಲೂಕಿನ ಸಿದ್ದಾಪುರ ಬಳಿಯ ಮಾನೆನದೊಡ್ಡಿಯಲ್ಲಿ ನಡೆಯಿತು.

ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು ಮಾನೆನದೊಡ್ಡಿಯ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೋಂಡಿದ್ದರು. ಆ ಕಾರ್ಯಕ್ರಮಕ್ಕೆ ಬಂದಿದ್ದ ಅದೇ ಗ್ರಾಮದ ರೈತ ವಸಂತ ಬೀರಪ್ಪ ಮಾನೆ ಸಚಿವರ ಬಳಿಗೆ ಬಂದು ತನ್ನ ತೋಟಕ್ಕೆ ಬರಲೇಬೇಕು ಎಂದು ಪ್ರೀತಿಯಿಂದ ಸಚಿವರನ್ನು ಕರೆದುಕೊಂಡು ಹೋದ.

ಅಲ್ಲಿ ತನ್ನ ತೋಟದಲ್ಲಿ ಬೆಳೆದಿದ್ದ ಹೂವುಗಳನ್ನು ಸಚಿವರಿಗೆ ತೋರಿಸಿದ. ಇದೆಕ್ಕೆಲ್ಲ ಸಚಿವರೇ ಕಾರಣ. ನನ್ನ ತಂದೆ- ತಾಯಿ ತನಗೆ ಜನ್ಮ ನೀಡಿದರೆ, ಸಚಿವ ಎಂ. ಬಿ. ಪಾಟೀಲರು ನೀರಾವರಿ ಮೂಲಕ ಬಾಳು ಹಸನಾಗಲು ಕಾರಣರಾಗಿದ್ದಾರೆ. ತನ್ನ ಬಳಿ 16 ಎಕರೆ ಜಮೀನಿದ್ದರೂ ಈ ಮುಂಚೆ ನೀರಾವರಿ ಸೌಲಭ್ಯವಿಲ್ಲದೆ, ಕೃಷಿಯನ್ನೇ ನೆಚ್ಚಿಕೊಂಡು ಬದುಕು ಕಟ್ಟಿಕೊಳ್ಳಲಾಗದೆ, ಅನಿವಾರ್ಯವಾಗಿ ನೆರೆಯ ಮಹಾರಾಷ್ಟ್ರಕ್ಕೆ ಕೂಲಿ ಕೆಲಸಕ್ಕೆ ತೆರಳಬೇಕಾದ ಪರಿಸ್ಥಿತಿ ಎದುರಿಸುತ್ತಿದ್ದೆ. ನನ್ನಂತೆ ಉಳಿದ ರೈತರೂ ಕೂಡ ಸ್ವಂತ ಜಮೀನಿದ್ದರೂ ಅದರಲ್ಲಿ ಸಮೃದ್ಧವಾಗಿ ಕೃಷಿ ಮಾಡಲು ಸಾಧ್ಯವಾಗದೆ ಸಂಕಷ್ಟದ ಬದುಕು ನಡೆಸುತ್ತಿದ್ದರು. ಆದರೆ, ಎಂ. ಬಿ. ಪಾಟೀಲ ಅವರು ಜಲಸಂಪನ್ಮೂಲ ಸಚಿವರಾಗಿದ್ದಾಗ ಕೈಗೊಂಡ ನೀರಾವರಿ ಯೋಜನೆಗಳ ಫಲವಾಗಿ ಈಗ ಬದುಕಿನಲ್ಲಿ ಹೊಸ ಆಶಾಕಿರಣ ಮೂಡಿದೆ. ಈಗ ನಮ್ಮಲ್ಲಿ ದುಷ್ಕಾಳ(ಬರ ಪರಿಸ್ಥಿತಿ) ಇದ್ದರೂ ನೀರಾವರಿಯಿಂದಾಗಿ ಅದರ ಅನುಭವವಾಗುತ್ತಿಲ್ಲ. ಇಂದು ಜಮೀನಿನಲ್ಲಿ ಹೂವುಗಳು ಅರಳುತ್ತಿವೆ. ಟೆಂಗಿನಕಾಯಿ ಬೆಳೆದಿದ್ದೇನೆ. ಶ್ರಾವಣ ಮಾಸದಲ್ಲಿ ಹೂವುಗಳಿಂದ ಪ್ರತಿನಿತ್ಯ ಸುಮಾರು 4 ಸಾವಿರ ಆದಾಯ ಗಳಿಸುತ್ತಿದ್ದೇನೆ. ಇದರ ಜೊತೆಗೆ ಕಬ್ಬು, ತೆಂಗು ಹಾಗೂ ತರಕಾರಿಗಳನ್ನೂ ಬೆಳೆದು ಕೃಷಿಯ ಮೂಲಕ ಸ್ವಾವಲಂಬಿ ಬದುಕು ನಡೆಸುತ್ತಿರುವುದಾಗಿ ತಿಳಿಸಿ ಸಚಿವರಿಗೆ ಹೂವು ಮತ್ತು ತೆಂಗು ಸಮರ್ಪಿಸಿ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಕೆಲವೇ ವರ್ಷಗಳ ಹಿಂದೆ ಇವರ ಹೊಲಕ್ಕೆ ಭೇಟಿ ನೀಡಿದ್ದೆ. ಅಂದು ಕಂಡಿದ್ದ ಅವರ ಕೃಷಿ, ತೋಟಗಾರಿಕೆಯ ಕಾಯಕ ಇಂದು ಇನ್ನಷ್ಟು ಏರುಗತಿಯಲ್ಲಿ ಸಾಗುತ್ತಿರುವುದು ಕಂಡು ಅಪಾರ ಸಂತಸ ತಂದಿದೆ. ಅವರ ಆತ್ಮೀಯ ಸ್ವಾಗತ ಮನಸ್ಸಿಗೆ ಮತ್ತಷ್ಟು ಹತ್ತಿರವಾಯಿತು. ತಾವೇ ಬೆಳೆದ ಹೂವುಗಳನ್ನು ಪ್ರೀತಿಯಿಂದ ತೋರಿಸಿ, ತಮ್ಮ ತೋಟದಲ್ಲಿ ಬೆಳೆದ ಎಳನೀರನ್ನು ಆತ್ಮೀಯತೆಯಿಂದ ನೀಡಿ ಸತ್ಕರಿಸಿದ ಅವರ ಸರಳತೆ, ಅಭಿಮಾನ, ಕೃತಜ್ಞತಾಭಾವ ಮತ್ತು ಆತಿಥ್ಯ ಹೃದಯಸ್ಪರ್ಶಿಯಾಗಿತ್ತು ರೈತನ ಪರಿಶ್ರಮದಿಂದ ಅರಳಿದ ಹೂವಿನ ಸುವಾಸನೆಯಷ್ಟೇ, ಅವರ ಆತಿಥ್ಯದಲ್ಲಿದ್ದ ಪ್ರೀತಿಯ ಸುವಾಸನೆಯೂ ಮನಸ್ಸಿನಲ್ಲಿ ಬಹುಕಾಲ ಉಳಿಯಲಿದೆ ಎಂದು ಸಂತಸ ವ್ಯಕ್ತಪಡಿಸಿದರು.

## ಅಗತ್ಯ ಮೂಲಸೌಕರ್ಯ ಕಲ್ಪಿಸಲು ಕ್ರಮ :ಸಚಿವ ಪಾಟೀಲ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು, ಮಂಗಳವಾರ ತಿಕೋಟಾ ತಾಲೂಕಿನ ಸಿದ್ದಾಪುರ ಬಳಿಯ ಮಾನೆನದೊಡ್ಡಿಯಲ್ಲಿ ನಡೆದ ಮರಿಗೆಮ್ಮ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೋಂಡು ದೇವಿಯ ದರ್ಶನ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ದೇವಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು, ದೇವರ ದರ್ಶನ ಪಡೆದದ್ದು ಮನಸ್ಸಿಗೆ ಸಂತಸ ತರಿಸಿದೆ. ಗ್ರಾಮಕ್ಕೆ ಸಮೀಪದ ಹಳ್ಳಕ್ಕೆ ನೀರು ಹರಿಸುವುದು, ಗ್ರಾಮದಲ್ಲಿ ಶಾಲೆ, ವಸತಿ ನಿಲಯ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದಅಧ್ಯಕ್ಷಡಾ.ಗಂಗಾಧರ ಸಂಬಣ್ಣಿ, ಮುಖಂಡರಾದ ಚನ್ನಪ್ಪ ದಳವಾಯಿ, ಅಶೋಕ ದಳವಾಯಿ, ನಿಂಗು ಬೆಳ್ಳಬ್ಬಿ, ಪೀರಪಟೇಲ ಪಾಟೀಲ, ರಂಗಾ ಸರಕಾರಿ, ಧನಂಜಯ ಮಾನೆ, ರಾಘು ಸುಳ್ಳವಸ್ತಿ ಮುಂತಾದವರು ಉಪಸ್ಥಿತರಿದ್ದರು.

## ರೈತರ ಜಮೀನುಗಳಿಗೆ ಮಾಜಿ ಶಾಸಕ ಸೋಮನಗೌಡ ಭೇಟಿ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ವಿಜಯಪುರ ಜಿಲ್ಲೆಯನ್ನು ಸಂಪೂರ್ಣ ಬರಗಾಲ ಪೀಡಿತ ಜಿಲ್ಲೆಯನ್ನಾಗಿ ಘೋಷಿಸಬೇಕು ಎಂದು ಮಾಜಿ ಶಾಸಕ ಸೋಮನಗೌಡ ಪಾಟೀಲ(ಸಾಸನೂರ) ಆಗ್ರಹಿಸಿದರು.

ತಾಲ್ಲೂಕಿನ ಜಾಲವಾದ, ಬಮ್ಮನಜೋಗಿ, ಇಬ್ರಾಹಿಂಪೂರ ಗ್ರಾಮದ ಜಮೀನುಗಳಿಗೆ ಬುಧವಾರ ರೈತರೊಂದಿಗೆ ಭೇಟಿ ನೀಡಿ ಮಾತನಾಡಿದರು. ದೇವರಹಿಪ್ಪರಗಿ ತಾಲ್ಲೂಕು ಸೇರಿದಂತೆ ಜಿಲ್ಲೆಯ ಬಹುತೇಕ ತಾಲ್ಲೂಕುಗಳ ವ್ಯಾಪ್ತಿಯ ಹತ್ತಿ, ತೊಗರಿ, ಕಬ್ಬು ಸಹಿತ ಬಿತ್ತನೆಯಾದ ಎಲ್ಲ ಬೆಳೆಗಳು ಮಳೆಯ ಕೊರತೆಯಿಂದ ಸಂಪೂರ್ಣ ಹಾಳಾಗಿದ್ದು, ಕೂಡಲೇ ರಾಜ್ಯ ಸರ್ಕಾರ ಸಮಗ್ರ ಜಿಲ್ಲೆಯನ್ನು ಬರಗಾಲ ಪೀಡಿತ ಜಿಲ್ಲೆ ಎಂದು ಘೋಷಿಸಬೇಕು. ರಾಜ್ಯ ಸರ್ಕಾರ ಈಗ ಘೋಷಣೆ ಮಾಡಿರುವ 3 ತಾಲ್ಲೂಕುಗಳ ಜೊತೆಗೆ ಉಳಿದ ಜಿಲ್ಲೆಯ 10 ತಾಲ್ಲೂಕುಗಳ ಬೆಳೆಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಅಲ್ಲದೇ ಅಧಿಕಾರಿಗಳ ಮೂಲಕ ಪುನಃ ಸರ್ವೇ ಕಾರ್ಯ ಮಾಡಿಸುವುದರ ಮೂಲಕ ಬೆಳೆ ಪರಿಹಾರ, ಸಾಲ ಮನ್ನಾ ಮಾಡಿ ರೈತರ ನೆರವಿಗೆ ಧಾವಿಸಬೇಕು ಎಂದರು.

ಜಾಲವಾದ ಗ್ರಾಮದ ರೈತ ರವಿಕಾಂತ ಮಣೂರ ವರ ತೊಗರಿ ಬೆಳೆ ಹಾಗೂ ಅಮೋಘಿ ಪೂಜಾರಿ ಅವರ ಹತ್ತಿ ಬೆಳೆ ಹಾಗೂ ಬಮ್ಮನಜೋಗಿ ಗ್ರಾಮದ ಮಲ್ಲನಗೌಡ ಪಾಟೀಲ ತಮ್ಮ ಹಾಳಾದ ಕಬ್ಬು ಬೆಳೆಗಳ ಕುರಿತು ಮಾಹಿತಿ ಹಂಚಿಕೊಂಡರು.

ಜಿಲ್ಲಾ ಬಿಜೆಪಿ ಕಾರ್ಯದರ್ಶಿ ರಮೇಶ ಮಸಬಿನಾಳ, ಮಂಡಲ ಅಧ್ಯಕ್ಷ ಅವ್ವಣ್ಣ ಗ್ವಾತಗಿ, ಮಾಜಿ ಅಧ್ಯಕ್ಷ ಭೀಮನಗೌಡ ಸಿದರಡ್ಡಿ, ಪ್ರಧಾನ ಕಾರ್ಯದರ್ಶಿಗಳಾದ ಪ್ರಕಾಶ ದೊಡಮನಿ, ಮಹಾಂತೇಶ ಬಿರಾದಾರ, ಎಸ್.ಸಿ. ಮೋರ್ಚಾ ಅಧ್ಯಕ್ಷ ಮಲ್ಲು ಬಾಗೇವಾಡಿ, ರೈತರಾದ ಬಸವರಾಜ ಕಲ್ಲೂರ, ಹಣಮಂತ್ರಾಯ ಮಣೂರ, ಶಿವಾನಂದ ಹಲ್ಲೂರ, ಧೂಳಪ್ಪ ಕರಿಕಬ್ಬಿ, ಬಿಜೆಪಿ ಪದಾಧಿಕಾರಿಗಳಾದ ಭೀಮನಗೌಡ ಲಚ್ಯಾಣ, ನಿಂಗನಗೌಡ ಪಾಟೀಲ, ಸೋಮು ದೇವೂರ, ಸಂಜು ಜಾಯವಾಡಗಿ, ರಾಘವೇಂದ್ರ ಗುಡಿಮನಿ, ಸಂಗು ಜನಗೊಂಡ, ಕಲ್ಮೇಶ ಬುದ್ನಿ, ದಯಾನಂದ ರಾಠೋಡ, ಶ್ರೀಶೈಲ ಯಂಭತ್ನಾಳ ಇದ್ದರು.

# ಕಾಲುವೆಗಾಗಿದೆ ನೂರಾರು ಕೋಟಿ ಖರ್ಚು, ಆದ್ರೂ ತಪ್ಪಿಲ್ಲ ನೀರಿಗೆ ಸರ್ಚು!

## ನದಿಯಲ್ಲಿ ನೀರಿದ್ದರೂ ರೈತರ ಹೊಲಕ್ಕೆ ನೀರಿಲ್ಲ | ಅಳ್ಳಗಿ (ಃ) ಕಾಲುವೆಯಲ್ಲಿ ಮುಳ್ಳು-ಕಂಟಿ | ಶಿವೂರ್-ಕುಡಿಗನೂರ್ ರೈತರು ಸಂಕಷ್ಟದಲ್ಲಿ | ಕಾಲುವೆ ನಿರ್ವಹಣೆ ವೈಫಲ್ಯಕ್ಕೆ ಬೆಳೆ ಬಲಿ

■ ಉದಯರಶ್ಮಿ ದಿನಪತ್ರಿಕೆ

■ ವಿಶೇಷ ವರದಿ




ಅಫಜಲಪುರ: ಭೀಮಾ ಏತ ನೀರಾವರಿ ಯೋಜನೆಯ ಅಳ್ಳಗಿ (ಃ) ಏತ ನೀರಾವರಿ ಕಾಲುವೆ, ಬರಪೀಡಿತ ಪ್ರದೇಶದ ರೈತರಿಗೆ ಆಶಾಕಿರಣವಾಗಬೇಕಿದ್ದರೂ ಇದೀಗ ಸಮಸ್ಯೆಯ ಮೂಲವಾಗಿರುವ ಆರೋಪ ಕೇಳಿಬರುತ್ತಿದೆ.

ಯೋಜನೆಯ ಕಾಲುವೆಯ ಕೊನೆಯ ಭಾಗದ ಶಿವೂರ್ ಹಾಗೂ ಕುಡಿಗನೂರ್ ಗ್ರಾಮಗಳ ಜಮೀನುಗಳಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ.

ಈ ವರ್ಷ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ಈಗಾಗಲೇ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಮಳೆ ಕೈಕೊಟ್ಟ ಪರಿಣಾಮ ಹಲವು ಜಮೀನುಗಳಲ್ಲಿನ ಬೆಳೆಗಳು ಒಣಗುವ ಹಂತಕ್ಕೆ ತಲುಪಿವೆ.

ಇಂತಹ ಸಂದರ್ಭದಲ್ಲಿ ಭೀಮಾ ನದಿಯಲ್ಲಿ ನೀರು ಇದ್ದರೂ ಅದನ್ನು ರೈತರ ಜಮೀನುಗಳಿಗೆ ತಲುಪಿಸಲು ಸಾಧ್ಯವಾಗದಿರುವುದು ವಿಪರ್ಯಾಸವಾಗಿದೆ.

ನೀರು ಹರಿಯಬೇಕಾದ ಅಳ್ಳಗಿ (ಃ) ಕಾಲುವೆಯ ಹಲವು ಭಾಗಗಳು ಮುಳ್ಳು-ಕಂಟಿ ಹಾಗೂ ಕಳೆಗಿಡಗಳಿಂದ ತುಂಬಿಕೊಂಡಿವೆ ಎಂಬುದು ಸ್ಥಳೀಯರ ಆರೋಪವಾಗಿದೆ.

ಕಾಲುವೆಯನ್ನು ಸಮಯಕ್ಕೆ ಸರಿಯಾಗಿ ಸ್ವಚ್ಛಗೊಳಿಸದಿರುವುದರಿಂದ ನೀರಿನ ಹರಿವಿಗೆ ಅಡ್ಡಿಯಾಗುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕಾಲುವೆಯ ನಿರ್ವಹಣೆ ಮತ್ತು ಸ್ವಚ್ಛತಾ ಕಾರ್ಯವನ್ನು ಸಂಬಂಧಪಟ್ಟ ಇಲಾಖೆ ಸಮರ್ಪಕವಾಗಿ ಕೈಗೊಂಡಿದೆಯೇ ಎಂಬ ಪ್ರಶ್ನೆ ಇದೀಗ ಎದುರಾಗಿದೆ.

ಕಾಲುವೆಯ ಆರಂಭಿಕ ಭಾಗಕ್ಕೆ ನೀರು ಹರಿದರೂ ಕೊನೆಯ ಭಾಗದ ಶಿವೂರ್ ಮತ್ತು ಕುಡಿಗನೂರ್‌ಗೆ ನೀರು ತಲುಪದಿರುವುದಕ್ಕೆ ನಿಖರ ಕಾರಣವೇನು ಎಂಬುದು ತನಿಖೆಯಾಗಬೇಕಾಗಿದೆ.

ಕಾಲುವೆಯ ಸಾಮರ್ಥ್ಯ, ನೀರಿನ ಹರಿವು ಹಾಗೂ ಕೊನೆಯ ಭಾಗದವರೆಗೆ ನೀರು ತಲುಪುವ ವ್ಯವಸ್ಥೆಯನ್ನು ತಾಂತ್ರಿಕವಾಗಿ ಪರಿಶೀಲಿಸಬೇಕಾಗಿದೆ.

ಕಾಲುವೆ ಸ್ವಚ್ಛತೆಗೆ ಪ್ರತಿ ವರ್ಷ ಅನುದಾನ ಬಿಡುಗಡೆಯಾಗುತ್ತಿದೆಯೇ ಎಂಬ ಮಾಹಿತಿಯನ್ನೂ ಅಧಿಕಾರಿಗಳು ಬಹಿರಂಗಪಡಿಸಬೇಕು.

ಅನುದಾನ ಬಿಡುಗಡೆಯಾಗಿದ್ದರೆ ಯಾವ ಕಾಮಗಾರಿಗೆ ಎಷ್ಟು ಹಣ ಖರ್ಚಾಗಿದೆ ಎಂಬ ಲೆಕ್ಕವನ್ನು ಸಾರ್ವಜನಿಕರ ಮುಂದಿಡಬೇಕು.

ಕಾಲುವೆ ಸ್ವಚ್ಛಗೊಳಿಸುವ ಕಾಮಗಾರಿ ಕಾಗದದ ಮೇಲಷ್ಟೇ ನಡೆದಿದೆಯೇ ಅಥವಾ ವಾಸ್ತವವಾಗಿ ಸ್ಥಳದಲ್ಲಿ ಕೆಲಸ ನಡೆದಿದೆಯೇ ಎಂಬುದನ್ನು ಪರಿಶೀಲಿಸಬೇಕಾಗಿದೆ.

ಗುತ್ತಿಗೆದಾರರಿಗೆ ಹಣ ಪಾವತಿಯಾಗಿದ್ದರೆ, ಕಾಮಗಾರಿ ಗುಣಮಟ್ಟ ಹಾಗೂ ಪೂರ್ಣಗೊಂಡಿರುವ ಬಗ್ಗೆ ಸ್ಥಳ ಪರಿಶೀಲನೆ ನಡೆಸಬೇಕು.

ಕಾಲುವೆಯೊಳಗಿನ ಮುಳ್ಳು-ಕಂಟಿ ತೆರವುಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಮಾಡುವ ತುರ್ತು ಕ್ರಮ ಕೈಗೊಳ್ಳಬೇಕಾಗಿದೆ.

ಅದೇ ರೀತಿ ಕಾಲುವೆಯ ಗೇಟ್‌ಗಳು, ನಿಯಂತ್ರಣ ವ್ಯವಸ್ಥೆ ಹಾಗೂ ಇತರ ತಾಂತ್ರಿಕ ವ್ಯವಸ್ಥೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂಬುದನ್ನೂ ಪರಿಶೀಲಿಸಬೇಕು.

ಪಂಪ್‌ಹೌಸ್‌ನಿಂದ ಎಷ್ಟು ಪ್ರಮಾಣದ ನೀರು ಎತ್ತಲಾಗುತ್ತಿದೆ ಮತ್ತು ಅಳ್ಳಗಿ (ಃ) ಕಾಲುವೆಗೆ ಎಷ್ಟು ನೀರು ಬಿಡಲಾಗುತ್ತಿದೆ ಎಂಬ ಮಾಹಿತಿಯೂ ಬಹಿರಂಗವಾಗಬೇಕು.

ನದಿಯಲ್ಲಿ ಲಭ್ಯವಿರುವ ನೀರನ್ನು ಯೋಜನೆಯ ನಿಯಮಾನುಸಾರ ರೈತರ ಜಮೀನುಗಳಿಗೆ ತಲುಪಿಸಲಾಗುತ್ತಿದೆಯೇ ಎಂಬುದಕ್ಕೆ ಅಧಿಕಾರಿಗಳು ಸ್ಪಷ್ಟ ಉತ್ತರ ನೀಡಬೇಕು.

ನೀರಿನ ಕೊರತೆಯಿಂದ ಬೆಳೆಗಳು ಒಣಗುತ್ತಿರುವ ಸಮಯದಲ್ಲಿ ಕಾಲುವೆ ನಿರ್ವಹಣೆಯಲ್ಲಿನ ನಿರ್ಲಕ್ಷ್ಯ ರೈತರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸುತ್ತಿದೆ.

ರೈತರು ತಮ್ಮ ಬೆಳೆ ಉಳಿಸಿಕೊಳ್ಳಲು ನೀರಿಗಾಗಿ ಅಧಿಕಾರಿಗಳ ಮೊರೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿರುವುದು ಆಡಳಿತದ ಕಾರ್ಯವೈಖರಿ ಕುರಿತು ಪ್ರಶ್ನೆ ಮೂಡಿಸಿದೆ.

ಯೋಜನೆಯ ಉದ್ದೇಶವೇ ನೀರಾವರಿ ಸೌಲಭ್ಯ ಒದಗಿಸುವುದಾದರೆ ಕೊನೆಯ ಭಾಗದ ರೈತರಿಗೆ ನೀರು ತಲುಪದಿರುವುದಕ್ಕೆ ಹೊಣೆಗಾರರು ಯಾರು ಎಂಬುದನ್ನು ನಿಗದಿಪಡಿಸಬೇಕು.

ಅಳ್ಳಗಿ (ಃ) ಕಾಲುವೆಯ ಸಂಪೂರ್ಣ ಮಾರ್ಗವನ್ನು ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲಿಸಿ, ನೀರು ತಲುಪದಿರುವ ತಾಂತ್ರಿಕ ಹಾಗೂ ಆಡಳಿತಾತ್ಮಕ ಕಾರಣಗಳನ್ನು ದಾಖಲಿಸಬೇಕು.

ಶಿವೂರ್ ಮತ್ತು ಕುಡಿಗನೂರ್ ಗ್ರಾಮಗಳ ರೈತರ ಸಮ್ಮುಖದಲ್ಲೇ ಕಾಲುವೆ ಪರಿಶೀಲನೆ ನಡೆಸಿ ವಾಸ್ತವ ಸ್ಥಿತಿಯ ವರದಿ ಸಿದ್ಧಪಡಿಸಬೇಕು.

ಕಾಲುವೆ ಸ್ವಚ್ಛತೆ, ದುರಸ್ತಿ ಮತ್ತು ನೀರು ಹರಿಸುವ ಕಾರ್ಯಕ್ಕೆ ತುರ್ತು ಕ್ರಮ ಕೈಗೊಂಡು ರೈತರ ಬೆಳೆಗಳನ್ನು ಉಳಿಸಲು ಪ್ರಯತ್ನಿಸಬೇಕು.

ಜೊತೆಗೆ ಕಳೆದ ಕೆಲವು ವರ್ಷಗಳಲ್ಲಿ ಕಾಲುವೆ ನಿರ್ವಹಣೆಗಾಗಿ ಬಿಡುಗಡೆಯಾದ ಅನುದಾನ ಮತ್ತು ಕೈಗೊಂಡ ಕಾಮಗಾರಿಗಳ ಕುರಿತು ಸಮಗ್ರ ತನಿಖೆ ನಡೆಸಬೇಕು.

ತನಿಖೆಯಲ್ಲಿ ಲೋಪ ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳು ಅಥವಾ ಗುತ್ತಿಗೆದಾರರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಬೇಕು.

### ಜಿಲ್ಲಾಡಳಿತ & ನೀರಾವರಿ ಇಲಾಖೆ ತಕ್ಷಣ ಮಧ್ಯಪ್ರವೇಶಿಸಲಿ

**"ನದಿಯಲ್ಲಿ ನೀರು ಇದ್ದರೂ ಕಾಲುವೆಯಲ್ಲಿ ನೀರು ಹರಿಯದಿದ್ದರೆ, ರೈತರ ಪಾಲಿಗೆ ಈ ನೀರಾವರಿ ಯೋಜನೆಯ ಪ್ರಯೋಜನವೇನು?" ಎಂಬ ಪ್ರಶ್ನೆ ಇದೀಗ ಗಂಭೀರವಾಗಿ ಕೇಳಿಬರುತ್ತಿದೆ.**
**ಮಳೆ ಕೊರತೆಯಿಂದ ಬೆಳೆಗಳು ಒಣಗುತ್ತಿರುವ ಸಂದರ್ಭದಲ್ಲಿ ಲಭ್ಯವಿರುವ ನದಿ ನೀರನ್ನು ಸಮರ್ಪಕವಾಗಿ ಬಳಸದೇ ಇರುವುದು ರೈತರ ಪಾಲಿಗೆ ದೊಡ್ಡ ನಷ್ಟವಾಗಬಹುದು.**
**ಆದ್ದರಿಂದ ಜಿಲ್ಲಾಡಳಿತ ಹಾಗೂ ನೀರಾವರಿ ಇಲಾಖೆ ತಕ್ಷಣ ಮಧ್ಯಪ್ರವೇಶಿಸಿ ಅಳ್ಳಗಿ (ಃ) ಕಾಲುವೆಯನ್ನು ಸ್ವಚ್ಛಗೊಳಿಸಿ ಕೊನೆಯ ಭಾಗದ ಶಿವೂರ್-ಕುಡಿಗನೂರ್ ಜಮೀನುಗಳಿಗೆ ನೀರು ತಲುಪಿಸುವಂತೆ ಕ್ರಮ ಕೈಗೊಳ್ಳಬೇಕು.**
**ರೈತನ ಹೊಲ ಒಣಗುತ್ತಿರುವಾಗ ನದಿಯಲ್ಲಿ ಹರಿಯುವ ನೀರು ಕೇವಲ ದೃಶ್ಯವಾಗಿರಬಾರದು; ಅದು ರೈತನ ಜಮೀನಿಗೆ ತಲುಪಿ ಬೆಳೆ ಉಳಿಸುವ ಜೀವಜಲವಾಗಬೇಕು.**

# ಮೆಟ್ಟಿಲು ಚಿಕ್ಕದಾದಷ್ಟು ಏರುವುದು ಸುಲಭ



## ಜಯ್ ನುಡಿ
(ವ್ಯಕ್ತಿತ್ವ ವಿಕಸನ ಕುರಿತು ಲೇಖನ ಮಾಲಿಕೆ)

■ ಉದಯರಶ್ಮಿ ದಿನಪತ್ರಿಕೆ

'ಕನಸು ಕಾಣುವ ಧೈರ್ಯ ಮಾಡಿ ಅದನ್ನು ನನಸಾಗಿಸುವ ಛಲವಿರಲಿ.' ಎಂಬುದು ಧೀರೂಭಾಯಿ ಅಂಬಾನಿಯವರ ಮಂತ್ರವಾಗಿತ್ತು. ಅವರು ಗುಜರಾತಿನ ಒಂದು ಸಣ್ಣ ಹಳ್ಳಿಯಲ್ಲಿ ಶಿಕ್ಷಕರ ಮಗನಾಗಿ ಜನಿಸಿದರು. ಅವರ ಆರಂಭಿಕ ಜೀವನ ಬಹಳ ಸಂಕಷ್ಟದಿಂದ ಕೂಡಿತ್ತು. ಅವರು ತಮ್ಮ ವೃತ್ತಿಜೀವನವನ್ನು ಯಾತ್ರಿಕ–ರಿಗೆ ಪಕೋಡಾ ಮಾರುವುದರ ಮೂಲಕ ಆರಂಭಿಸಿದರು. ನಂತರ ಯೆಮೆನ್ ದೇಶಕ್ಕೆ ತೆರಳಿ ಕೇವಲ 300 ರೂಪಾಯಿ ಸಂಬಳಕ್ಕೆ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಿದರು. ನಂತರ ಭಾರತಕ್ಕೆ ಮರಳಿ ಕೇವಲ 50,000 ರೂಪಾಯಿ ಬಂಡವಾಳದೊಂದಿಗೆ ಸಣ್ಣ ವ್ಯಾಪಾರ ಆರಂಭಿಸಿದರು. ಮುಂದೆ ಅವ–ರಿಂದ ಸ್ಥಾಪಿತವಾದ ರಿಲಯನ್ಸ್ ಇಂ–ಡಸ್ಟ್ರೀಸ್ ಇಂದು ವಿಶ್ವದ ಅತಿದೊಡ್ಡ ಕಂಪನಿಗಳಲ್ಲಿ ಒಂದಾಗಿದೆ. ಧೀರೂಭಾಯಿ ಅಂಬಾನಿಯವರು ಗೆಲುವಿನ ದೊಡ್ಡ ಸಾಮ್ರಾಜ್ಯ ಕಟ್ಟಿದ್ದು ಸಣ್ಣ ಆರಂಭದಿಂದಲೇ! ಸಣ್ಣ ಆರಂಭದಿಂದ ದೊಡ್ಡ ಮಟ್ಟದ ಯಶಸ್ಸು ಕಂಡವರ ಕಥೆಗಳು ನಮಗೆ ಸದಾ ಸ್ಫೂರ್ತಿ ನೀಡುತ್ತವೆ. ನಾವೂ ಅವರ ಸಾಲಿನಲ್ಲಿ ಒಬ್ಬರಾಗಬೇಕೆಂದರೆ ಏನನ್ನು ಮಾಡಬೇಕು ಏನನ್ನು ತಿಳಿದುಕೊಳ್ಳಬೇಕು ಎಂಬುದನ್ನು ತಿಳಿಯೋಣ ಬನ್ನಿ.



### ಪುಟ್ಟ ಪ್ರಯತ್ನ

'ಸಾವಿರ ಮೈಲಿಗಳ ಸುದೀರ್ಘ ಪಯಣವೂ ಒಂದು ಪುಟ್ಟ ಹೆಜ್ಜೆಯೊಂದಿಗೆ ಆರಂಭವಾಗುತ್ತದೆ.' ಎಂಬುದು ಲಾವೊತ್ಸು ಹೇಳಿದ ಜನಪ್ರಿಯ ಮಾತು. ಇದು ಸಣ್ಣ ಆರಂಭವು ದೊಡ್ಡ ಗೆಲುವಿಗೆ ನಾಂದಿ ಹಾಡುವ ಮಹತ್ವವನ್ನು ತಿಳಿಸುತ್ತದೆ. ಪ್ರತಿಯೊಂದು ದೊಡ್ಡ ಸಾಧನೆಯ ಹಿಂದೆ ಒಂದು ಪುಟ್ಟ ಪ್ರಯತ್ನ ಇರುತ್ತದೆ. ಯಾವುದೇ ಸಾಧಕರ ಜೀವನ ಚರಿತ್ರೆಯ ಮೇಲೆ ಕಣ್ಣು ಹಾಯಿಸಿದರೂ ಒಂದು ಸತ್ಯ ಸ್ಪಷ್ಟವಾಗುತ್ತದೆ: ಅವರೆಲ್ಲ ದೊಡ್ಡ ಗುರಿಗಳನ್ನು



ತಲುಪಲು ಮೊದಲಿಗೆ ಶುರು ಮಾಡಿದ್ದು ಸಣ್ಣ ಮಟ್ಟದಲ್ಲಿ. ಇದರರ್ಥ ಯಾವುದೇ ದೊಡ್ಡದು ಆರಂಭವಾಗುವುದು ಸಣ್ಣದರಿಂದಲೇ. ದೊಡ್ಡದೆಂದರೆ ಏನಲ್ಲ ಸಣ್ಣ ಸಣ್ಣವುಗಳ ರಾಶಿ ಅಷ್ಟೇ!

### ಕಿರುಹೆಜ್ಜೆ

ಆರಂಭದ ಹೆಜ್ಜೆ ಕಿರು ಹೆಜ್ಜೆಯಾಗಿ ಕಂಡರೂ ನಿರಂತರವಾದ ಅದೇ ಹೆಜ್ಜೆ ಬೃಹದಾಕಾರವಾಗಿ ಬೆಳೆದು ನಿಲ್ಲುವಂತೆ ಮಾಡುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಪುಟ್ಟ ಪುಟ್ಟ ಹೆಜ್ಜೆಗಳಲ್ಲಿನ ಪ್ರಾಮಾಣಿಕತೆ ಮತ್ತು ಅವಿರತ ಪರಿಶ್ರಮ ಮುಖ್ಯವಾಗಿರುತ್ತದೆ ಎಂಬುದನ್ನು ಮರೆಯುವಂತಿಲ್ಲ. 'ಸಣ್ಣ ಗು–ರಿಯನ್ನು ಇಟ್ಟುಕೊಳ್ಳುವುದು ಅಪರಾಧ.' (ಲೋ ಏಮ್ ಇಸ್ ಅ ಕ್ರೈಮ್) ಎಂದಿದ್ದಾರೆ 'ಮಿಸೈಲ್ ಮ್ಯಾನ್ ಆಫ್ ಇಂಡಿಯಾ' ಎಂದು ಹೆಸರಾದ ಎಪಿಜೆ ಅಬ್ದುಲ್ ಕಲಾಂ. ದೊಡ್ಡ ದೊಡ್ಡ ಕನಸುಗಳನ್ನು ಕಾಣುವ ಮನಸ್ಸಿನದು ತಪ್ಪಿಲ್ಲ. ಆದರೆ ಆ ಕನಸಿನತ್ತ ಸಾಗಲು ಇಡುವ ಆರಂಭದ ಗಟ್ಟಿಯಾದ ಪುಟ್ಟ ಹೆಜ್ಜೆ ದೊಡ್ಡ ಸಾಧನೆಗೆ ಮುನ್ನುಡಿಯನ್ನು ಬರೆಯುತ್ತದೆ. ಪುಟ್ಟದಾದ ಹೆಜ್ಜೆಗಳು ನಮ್ಮ ಆತ್ಮವಿಶ್ವಾಸವನ್ನು ದೊಡ್ಡದಾಗಿ ಹೆಚ್ಚಿಸುತ್ತವೆ ಎಂಬುದರಲ್ಲಿ ಸಂಶಯವೇ ಇಲ್ಲ.

### ಅಡೆತಡೆ

ಇಂಗ್ಲೀಷ್‌ನಲ್ಲಿ 'ವೆಲ್ ಬಿಗನ್ ಇಸ್ ಹಾಫ್ ಡನ್.' (ಸರಿಯಾಗಿ ಆರಂಭಿಸಿದರೆ ಅರ್ಧ ಗೆಲುವು ಸಿಕ್ಕಂತೆ ಉಳಿದರ್ಧ ಗೆಲುವು ಆ ಗುರಿಯತ್ತ ಸಾಗುವ ನಿರಂತರ ಪ್ರಯತ್ನದಲ್ಲಿದೆ) ಎಂಬ ಮಾತಿದೆ. ಯಾವುದೇ ಗುರಿಯಲ್ಲಾಗಲಿ ಆರಂಭದ ಹಂತ ಬಹಳ ಮುಖ್ಯವಾಗಿರುತ್ತದೆ. ಹಾಗಂತ ಆರಂಭದಲ್ಲಿ ಒಮ್ಮಲೇ ಗೆಲುವಿನ ದಾರಿ ಸ್ಪಷ್ಟವಾಗಿ ಗೋಚರವಾಗುವುದಿಲ್ಲ. ಯಾವುದೇ ಅಡೆತಡೆಯಿಲ್ಲದೇ ಸಾಗುವುದೂ ಇಲ್ಲ. ಕಾರ್ಯಾರಂಭ ಮಾಡಿದ ಮೇಲೆ ಸಣ್ಣಪುಟ್ಟ ಅಡೆತಡೆಗಳು ಬರುವುದು ಸಾಮಾನ್ಯ. ಸಾಮಾನ್ಯ ಮನಸ್ಥಿತಿಯುಳ್ಳ ಜನರು ಇಂಥ ಸಾಮಾನ್ಯ ಅಡೆತಡೆಗಳಿಗೆ ಹೆದರಿ, ಮುಂದೆ ಹೋಗಲು ಭಯಗೊಳ್ಳುತ್ತಾರೆ. ಮುಂದೇನಾಗುವುದೋ ಎಂಬ ಆತಂಕದಲ್ಲಿ ಹಿಂದೆ ಸರಿಯುತ್ತಾರೆ. ತಮ್ಮ ಕನಸನ್ನು ಶುರುವಾತಿನಲ್ಲಿಯೇ ಅರ್ಧಕ್ಕೆ ಕೈ ಬಿಡುತ್ತಾರೆ. ನೋಡು ನೋಡುತ್ತಿದ್ದಂತೆಯೇ ತಮ್ಮ ಯೋಜನೆಗೆ ಎಳ್ಳು ನೀರು ಬಿಡುತ್ತಾರೆ. ಆದರೆ ಸಾಧಿಸಲೇಬೇಕೆಂಬ ಛಲವುಳ್ಳವರು ಮುಂದಿಟ್ಟ ಹೆಜ್ಜೆ ಹಿಂದೆ ತೆಗೆಯದೆ ಮುನ್ನುಗ್ಗುತ್ತಾರೆ. ಈ ಸಾಮಾನ್ಯರೇ ಮುಂದೆ ಹೋಗಿ ಅಸಾಮಾನ್ಯರಾಗುತ್ತಾರೆ. ನೆನಪಿಡಿ: ಇಂದು ನೂರಾರು ಕೋಟಿ ವಹಿವಾಟು ನಡೆಸುವ ಕಂಪನಿಗಳು ಸಹ ಒಂದು ಚಿಕ್ಕ ಕೊಠಡಿಯಲ್ಲಿ ಸಣ್ಣ ಬಂಡವಾಳದೊಂದಿಗೆ ಆರಂಭವಾದವುಗಳೇ!


ಗೆಲುವಿನ ಹಾದಿಯಲ್ಲಿ ಪುಟ್ಟ ಹೆಜ್ಜೆ ಇಡುವ ಮುನ್ನ ಮತ್ತು ನಂತರ ಯಾವ್ಯಾವ ಅಂಶಗಳನ್ನು ಗಮನಿಸಬೇಕೆಂದು ನೋಡೋಣ ಬನ್ನಿ.

### ಸ್ಪಷ್ಟ ಗುರಿ

'ಗುರಿಯಿಲ್ಲದ ಜೀವನ, ದಾರಿಯಿಲ್ಲದ ಪಯಣವಿದ್ದಂತೆ ಎಲ್ಲಿಗೆ ತಲುಪಬೇಕು ಎಂಬುದು ಸ್ಪಷ್ಟವಾಗಿದ್ದರೆ ಮಾತ್ರ ಪ್ರಯಾಣ ಸುಖವಾಗಿರುತ್ತದೆ.' ನಿಗದಿತ ಗುರಿ ಇಲ್ಲದ ಪಯಣ, ವಿಳಾಸವಿಲ್ಲದ ಪತ್ರದಂತೆ ಅದು ಎಲ್ಲಿಗೂ ತಲುಪುವುದಿಲ್ಲ. ಅಂತೆಯೇ ಗುರಿಯಿಲ್ಲದ ಜೀವನದ ಕತೆಯೂ ಆಗುತ್ತದೆ. 'ಗುರಿ ಸ್ಪಷ್ಟವಾಗಿದ್ದರೆ ದಾರಿ ಕಷ್ಟವೆನಿಸುವುದಿಲ್ಲ.' ನೀವು ಏನನ್ನು ಸಾಧಿಸಲು ಬಯಸುತ್ತಿದ್ದೀರಿ ಎಂಬುದನ್ನು ಮೊದಲೇ ನಿರ್ಧರಿಸಿ. ಅದನ್ನು ಒಂದು ಹಾಳೆಯಲ್ಲಿ ದೊಡ್ಡದಾಗಿ ಬರೆದು ನಿಮಗೆ ಮೇಲಿಂದ ಮೇಲೆ ಕಾಣುವಂತೆ ತೂಗು ಹಾಕಿ. 'ನಿಮ್ಮ ಗುರಿಯು ಕೇವಲ ಕನಸಾಗಿರಬಾರದು ಅದು ನಿಮ್ಮನ್ನು ನಿದ್ದೆಯಿಂದ ಎಬ್ಬಿಸುವ ಸಂಕಲ್ಪವಾಗಬೇಕು.' ಎಂದಿದ್ದಾರೆ ಕಲಾಂಜಿ. ಸ್ವಾಮೀ ವಿವೇಕಾನಂದರ ನುಡಿಯಂತೆ 'ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ.'

### ಚಿಕ್ಕ ಚಿಕ್ಕ ಹಂತ

ಒಂದೇ ಬಾರಿ ದೊಡ್ಡ ಜಿಗಿತಕ್ಕೆ ಪ್ರಯತ್ನಿಸಿದರೆ ಬೀಳುವ ಭಯವಿರತ್ತದೆ. ಆದರೆ ಸಣ್ಣ ಹಂತಗಳಲ್ಲಿ ಸಾಗುವಾಗ ತಪ್ಪಾದರೆ ಅದನ್ನು ಸರಿಪಡಿಸಿಕೊಳ್ಳಲು ಅವಕಾಶವಿರುತ್ತದೆ. ಯಾವುದೇ ದೊಡ್ಡ ಗುರಿ ಮೊದಲ ನೋಟಕ್ಕೆ ದೊಡ್ಡ ಗುಡ್ಡದಂತೆ ಕಾಣುತ್ತದೆ. ಆದರೆ ಅದನ್ನು ದಿನದ ವಾರದ ಅಥವಾ ತಿಂಗಳದ ಗುರಿಯಾಗಿ ವಿಭಜಿಸಿದರೆ ಸುಲಭವಾಗಿ ಸಾಧಿಸಬಹುದು ಎಂದು ಅನಿಸುತ್ತದೆ. ಆದ್ದರಿಂದ ದೊಡ್ಡ ಗು–ರಿಯನ್ನು ತಲುಪಲು ಚಿಕ್ಕ ಚಿಕ್ಕ ಹಂತಗಳನ್ನು ರೂಪಿಸಿಕೊಳ್ಳಿ. ಪ್ರತಿಬಾರಿ ನೀವು ಸಣ್ಣ ಹಂತವನ್ನು ಪೂರ್ಣಗೊಳಿಸಿದಾಗ ನಿಮಗೆ ಖುಷಿಯಾಗುತ್ತದೆ. ಅದು ಮುಂದಿನ ಹಂತಕ್ಕೆ ಹೋಗಲು ಉತ್ಸಾಹ ತುಂಬುತ್ತದೆ.



### ಕಲಿಕೆ

ಗುರಿಗೆ ಸಹಾಯಕವಾಗುವ ವಿಷಯಗಳನ್ನು ಪ್ರತಿದಿನವೂ ಕಲಿಯುವ ಆಸಕ್ತಿಯನ್ನು ತೋರಬೇಕು. ಗು–ರಿಗೆ ಪೂರಕವಾದ ಹೊಸ ವಿಷಯಗಳನ್ನು ಕಲಿಯುವಲ್ಲಿ ಉತ್ಸಾಹವನ್ನು ಇಮ್ಮಡಿಗೊಳಿಸಿಕೊಳ್ಳಬೇಕು. ನಿಮ್ಮ ಗೆಲುವಿಗೆ ಸಹಾಯ ಮಾಡುವ ಒಳ್ಳೆಯ ಅಂಶಗಳು ಎಲ್ಲಿಂದಲೇ ಬಂದರೂ ಯಾರಿಂದಲೇ ಬಂದರೂ ಅವುಗಳನ್ನು ಸ್ವಾಗತಿಸಿ. ಗೊತ್ತಿಲ್ಲದ ಸಂಗತಿಗಳನ್ನು ಮನಸ್ಸಿಟ್ಟು ಕಲಿಯಿರಿ. ಕಲಿಕೆಯ ಹಾದಿಯಲ್ಲಿ ನಿಂದೆ ಟೀಕೆಗಳು ಬರದೇ ಇರುವುದಿಲ್ಲ. ಅಂಥ ಟೀಕೆಗಳಿಗೆ ಕಿವಿಗೊಡದೆ ನಿಮ್ಮ ಕಲಿಕೆಯತ್ತ ಗಮನಹರಿಸಿ.

### ಸತತ ಪ್ರಯತ್ನ

ದೊಡ್ಡ ಗುರಿಗಿಂತಲೂ ಆ ಗುರಿಯತ್ತ ಸಾಗುವ ನಿರಂತರತೆ ಮುಖ್ಯ. ದಿನಕ್ಕೆ ಏಳೆಂಟು ಗಂಟೆ ಕೆಲಸ ಮಾಡಿ ಆರಂಭ ಶೂರತ್ವ ತೋರಿಸಿ ಸೋಲುವುದಕ್ಕಿಂತ ಪ್ರತಿದಿನ ಶ್ರದ್ಧೆಯಿಂದ ಒಂದು ಗಂಟೆ ಕೆಲಸ ಮಾಡುವುದು ದೊಡ್ಡ ಗೆಲುವಿಗೆ ಸಹಕಾರಿ.ನಮ್ಮಲ್ಲಿಬಹುತೇಕರುಹಗಲುಗನಸು ಕಾಣುತ್ತಲೇ ಇರುತ್ತಾರೆ. ಹಗಲುಗನಸು ಕಾಣುತ್ತಲೇ ಹಗಲು ಕಳೆದುಬಿಡುತ್ತಾರೆ ಹೀಗಾಗಿ ಕನಸುಗಳೆಂದೂ ನನಸಾಗುವುದಿಲ್ಲ. ಸಾಧಿಸಿಯೇ ತೀರುತ್ತೇನೆಂಬ ಎದೆಗಾರಿಕೆ ಉಳ್ಳವರು ಸತತ ಪರಿಶ್ರಮ ಮತ್ತು ದೃಢ ಸಂಕಲ್ಪ ಹೊಂದಿರುವವರು ಮಾತ್ರ ಯಶಸ್ಸಿನ ಭಾಜನರಾಗುತ್ತಾರೆ.

### ಏರುವುದು ಸುಲಭ

ಒಂದು ದೊಡ್ಡ ಏಣಿಯನ್ನು ಹತ್ತಲು ನೀವು ಮೊದಲು ಮೆಟ್ಟಿಲನ್ನೇ ಹತ್ತಬೇಕು. ಮೆಟ್ಟಿಲುಗಳು ಚಿಕ್ಕದಾಗಿದ್ದಷ್ಟೂ ಏರುವುದು ಸುಲಭ. ಗುರಿಯತ್ತ ಇಡುವ ಸಣ್ಣ ಹೆಜ್ಜೆಗಳು ನಮ್ಮ ಅನುಭವದ ಖಜಾನೆಗೆ ಕಾಣಿಕೆ ನೀಡುತ್ತವೆ. ಚಿಕ್ಕ ಚಿಕ್ಕ ಅನುಭವಗಳೇ ಮುಂದೆ ದೊಡ್ಡ ಗೆಲುವಿಗೆ ದಾರಿ ಮಾಡಿಕೊಡುತ್ತವೆ. ಆದ್ದರಿಂದ ಆರಂಭಕ್ಕಾಗಿ ಸರಿಯಾದ ಸಮಯ ಶುಭ ಮುಹೂರ್ತಕ್ಕೆಂದು ಕಾಯದೆ ಈ ಸಮಯ ಶುಭ ಸಮಯ ಈ ದಿನ ಶುಭ ದಿನವೆಂದು ತಿಳಿದು ಸಣ್ಣ ಹೆಜ್ಜೆಯನ್ನು ಇಡಿ. ದೊಡ್ಡ ಗೆಲುವು ನಿಮ್ಮನ್ನು ತೆರೆದು ತೋಳುಗಳಿಂದ ಸ್ವಾಗತಿಸುತ್ತದೆ.

ಲೇಖನ
– ಜಯಶ್ರೀ.ಜೆ.
ಅಬ್ಬಿಗೇರಿ.
ಇಂಗ್ಲೀಷ್
ಉಪನ್ಯಾಸಕರು
ಬೆಳಗಾವಿ
ಮೊ: 9449234142



# ಶರಣರಿಂದ ಸಿದ್ಧಾಂತ, ಸ್ವಾಮಿಗಳಿಂದ ಸಂಪ್ರದಾಯ ಸ್ಥಾಪನೆ

## ಬನ್ನಿ ಬಸವಣ್ಣನವರು ಕಟ್ಟಿದ ಕಲ್ಯಾಣವನ್ನು ಮತ್ತೆ ಸ್ಥಾಪಿಸೋಣ, ಕಾವಿ - ಖಾದಿ ಹೊರತು ಪಡಿಸಿ..
- ಡಾ.ಶಶಿಕಾಂತ ಪಟ್ಟಣ

■ ಉದಯರಶ್ಮಿ ದಿನಪತ್ರಿಕೆ

ಹನ್ನೆರಡನೆಯ ಶತಮಾನದ ಕಲ್ಯಾಣ ನಾಡಿನ ಬಸವಾದಿ ಶರಣರು ಸಾರ್ವಕಾಲಿಕ ಸಮತೆ ಸಾರುವ ಕಾಯಕ ದಾಸೋಹ ತತ್ವಗಳ ಅಡಿಯ ಮೇಲೆ ಲಿಂಗಾಯತ ಎಂಬ ಹೊಸ ಧರ್ಮದ ವೈಚಾರಿಕ ಸಿದ್ಧಾಂತವನ್ನು ಜಗತ್ತಿಗೆ ಕೊಟ್ಟರು.

ಅಷ್ಟಾವರಣಗಳು –ತತ್ವಕ್ಕೆ ಸೀಮಿತವಾದ ಸಂಕೇತಗಳು.ಗುರು ಲಿಂಗ ಜಂಗಮ ರುದ್ರಾಕ್ಷಿ ವಿಭೂತಿ ಮಂತ್ರ ಪಾದೋದಕ ಪ್ರಸಾದ ಎಂಬ ಎಂಟು ಅವತರಣಿಕೆಗಳು ಭೌತಿಕ ವಸ್ತುಗಳಲ್ಲ. ಪಂಚ ಮಹಾಭೂತಗಳ ಒಂದೊಂದು ತತ್ವ ಮಾತ್ರ .ಇದನ್ನು ಚಾಮರಸ ತನ್ನ ಪ್ರಭುಲಿಂಗಲೀಲೆಯಲ್ಲಿ

**"ಕಾಯದೊಳು ಗುರು ಲಿಂಗ ಜಂಗಮ**
**ದಾಯತವನರಿಯಲ್ಕೆ ಸುಲಭೋ**
**ಪಾಯದಿಂದಿದಿರಿಟ್ಟು ಬಾಹ್ಯಸ್ಥಲಕೆ ಕುರುಹಾಗಿ**
**। ದಾಯದೋರಿ ಸಮಸ್ತ ಭಕ್ತ ನಿ**
**ಕಾಯವನು ಪಾವನವ ಮಾಡಿದ**

ರಾಯ ಪೂರ್ವಾಚಾರ್ಯ ಸಂಗನಬಸವ ಶರಣಾರ್ಥಿ॥ ಚಾಮರಸ ( ಪ್ರಭು ಲಿಂಗ ಲೀಲೆ ).

ಶರೀರದಲ್ಲಿಯೇ ಇರುವ ಗುರು ಲಿಂಗ ಜಂಗಮ ತತ್ವವನ್ನು ವಿಸ್ತಾರಗೊಳಿಸಿ ಆಚರಿಸುವ ಸಲುವಾಗಿ, ಸುಲಭ ಸಾಧನವೆಂಬ ಇಷ್ಟಲಿಂಗ (ಕುರುಹು) ವನ್ನು ಪರಿಕಲ್ಪಿಸಿಕೊಟ್ಟು, ಸಮಸ್ತ ಜನವರ್ಗವನ್ನು ಪಾವನ ಮಾಡಿದವನು ಬಸವಣ್ಣ.

ಸನಾತನದಲ್ಲಿ ಗುರು ಸರ್ವ ಶ್ರೇಷ್ಠ ಅವನಿಂದಲೇ ಮುಕ್ತಿ ದಾರಿ ತೋರುವ ನಿಜ ಗುರು ಹರನಿಗಿಂತಲೂ ಶ್ರೇಷ್ಠ ಇಂತಹ ಅನೇಕ ಕಲ್ಪನೆಗಳು ಬಸವಣ್ಣನವರು ಕಿತ್ತೊಗೆದು, ದೀಪದಿಂದ ದೀಪ ಹಚ್ಚುವ ಪರಿಕಲ್ಪನೆ ಅಥವಾ ಗುರು ತನ್ನ ಕಾರ್ಯ ನಿರ್ವಹಿಸಿ ತಾನು ಶಿಷ್ಯನಲ್ಲಿ ಒಂದಾಗಿ ತಾನು ಗುರು ಆತ ಶಿಷ್ಯ ಎಂಬ ಬೇರೆ ಭಾವವನ್ನು ಸಂಪೂರ್ಣ ಕಳೆದು ಕೊಳ್ಳುತ್ತಾನೆ

ಶರಣರು ತಾನು ಮತ್ತು ಶಿವ ಒಂದು ಎಂದು ಸಾಧಿಸಿದ ಮೊದಲ ಪುರುಷರು. ಉಭಯ ಭಾವವನ್ನು ಎಲ್ಲಿಯೂ ಪ್ರತಿಪಾದಿಸದೆ ಅಂತಹ ಸಂದೇಹ ಗೊಂದಲಗಳನ್ನು ಕಿತ್ತು ಹಾಕಿದರು. ಮನುಷ್ಯ ತಾನು ತನ್ನ ಸುತ್ತಲಿನ ಜೀವ ಜಾಲದ ಚೈತನ್ಯವನ್ನು ಚಿತ್ಕಳೆಯನ್ನು ನಿರಾಕಾರದ ಶಿವನ ಪರಿಕಲ್ಪನೆಯನ್ನು ಸಾಕಾರ ಗೊಳಿಸಿ,





ಮತ್ತೆ ನಿರಾಕಾರದ ನಿರುಪಾಧಿಕ ತತ್ವದ ಆಧ್ಯಾತ್ಮಿಕ ಪಯಣಕ್ಕೆ ಕರೆದೊಯ್ಯುವುದೇ ಶರಣ ಮಾರ್ಗ.

ಜಂಗಮ ಪದ ಶರಣ–ರು ಸಮಾಜವೆಂತಲೂ ತತ್ವ ನಿಷ್ಠ ಸಾಧಕರೆಂತಲೂ ಸಮಷ್ಟಿ ಎಂತಲೂ ಬಳಸಿ ಲಿಂಗವೇ ಜಂಗಮ ಎಂದೆನ್ನುತ್ತಾ ವ್ಯಕ್ತಿ ಸಮಷ್ಟಿಯ ಸಂಬಂಧಗಳನ್ನು ಗಟ್ಟಿಗೊಳಿಸಿದ್ದಾರೆ. ಬಸುರಿಗೆ ಮಾಡಿದ ಸುಖ ದುಃಖಗಳು ಶಿಶುವಿಗೆ ಮೂಲ ಎಂದು ಹೇಳಿ ಬಸುರಿ –ಇದು ಜಂಗಮ ಪರಿಕಲ್ಪನೆ ,ಶಿಶು ಭಕ್ತನಾಗುತ್ತಾನೆ.

ಜಗತ್ತಿನಲ್ಲಿ ಸಾಂಸ್ಥಿಕರಣವನ್ನು ಧಿಕ್ಕರಿಸಿ ಕಾವಿ ಕಾಷಾಯಾಂಬರವನ್ನು ಲಾಂಛನವನ್ನು ವೇಷ ಭೂಷಣವನ್ನು ತಿರಸ್ಕರಿಸಿದ ಶರಣರ ತತ್ವಗಳನ್ನು ಇಂದು ಬಹುತೇಕ ಮಠಾಧೀಶರು ಸಮಾಧಿಗೊಳಿಸಿ ತಮ್ಮ ತಮ್ಮ ವ್ಯಾಪಾರ ವಹಿವಾಟು ಮಾಡುತ್ತಾ ಮಠಗಳನ್ನು ಹಣ ಮಾಡುವ ಕೇಂದ್ರಗಳನ್ನಾಗಿ ಮಾಡಿದ್ದು ದುರಂತವೇ ಸರಿ.ಹದಿನಾರನೆಯ ಶತಮಾನದಲ್ಲಿ ಶೈವೀಕರಣ ವೀರಶೈವೀಕರಣವು ಲಿಂಗಾಯತ ಸಾಹಿತ್ಯ ವಚನಗಳಲ್ಲಿ ಸೇರ್ಪಡೆಗೊಂಡು ಆಚರಣೆ ಜಪ ತಪ ಪೂಜೆ ಅರ್ಚನೆಗಳನ್ನು ವೃದ್ಧಿಸಿ ಲಿಂಗಾಯತ ತತ್ವಗಳನ್ನು ಸಂಪೂರ್ಣವೈದಿಕಗೊಳಿಸಿ ಸನಾತನ ವ್ಯವಸ್ಥೆಗೆ ಒತ್ತೆ ಇಟ್ಟರು ನಮ್ಮ ಕಾವಿ ಮತ್ತುಶ್ವೇತ ವಸ್ತ್ರಧಾರಿಗಳು.



ಅಷ್ಟಾವರಣಗಳು ತತ್ವಗಳು –ಲಿಂಗವು ಅರಿವಿನ ಕುರುಹು ಅರಿವಿನೊಂದಿಗೆ ನಡೆಸುವ ಅನುಸಂಧಾನವೇ ಶಿವಯೋಗ. ಲಿಂಗ ಪೂಜೆಯಲ್ಲ.ಇದನ್ನೇ ನಿಜಗುಣ ಶಿವಯೋಗಿಗಳು

" ಮಾತು ಮನದಿಂದ ಅತ್ತತ್ತ ಮೀರಿದ ಸಾತಿಶಯ ನಿರುಪಡಿತ ಲಿಂಗವೇ ಜ್ಯೋತಿ ಬೆಳಗುತಿದೆ ಎಂದಿದ್ದಾರೆ. ಅಂದರೆ ಲಿಂಗವು ಉಪಾದಿತ ವಸ್ತುವಲ್ಲ.

ಇದೆ ರೀತಿ ಮಂತ್ರವು ಕೂಡ ವ್ಯಕ್ತಿಗತವಾಗಿ ಮನಸ್ಸನ್ನು ಪ್ರಾಣ ದೇಹದೊಂದಿಗೆ ಸಮ್ಮಿಳನಗೊಳಿಸುವ ಉದ್ದೇಶದಿಂದ ಅಕ್ಷರ ಮೂಲಕ ವಾಯುಗುಣವನ್ನು ಭಕ್ತ ಅವಲಂಬಿಸುತ್ತಾನೆ. ಅಷ್ಟಾವರಣಗಳನ್ನು ವೈಜ್ಞಾನಿಕ ತಳಹದಿಯ ಮೇಲೆ ಚರ್ಚಿಸಬೇಕು. ಮಂತ್ರವು ಬಸವಾಕ್ಷರವಾಗಿರಬೇಕೆಂದು ಸಿದ್ಧರ್ಮ ಶರಣರು ಹೇಳಿದಾಗ ಓಂ ನಮಃ ಶಿವಾಯ ಎಂಬುದು ಸರಿಯೇ ಎಂದು ಕೇಳುವುದು ಯಾವ ನ್ಯಾಯ ?

ಭಕ್ತರಲ್ಲಿ ಅನೇಕ ಸಂಶಯಗಳು ಉಂಟಾಗುತ್ತವೆ ನಮ್ಮ ಗುರುಗಳೆನಿಸಿಕೊಂಡವರು ತಪ್ಪು ಮಾರ್ಗವನ್ನು ತೋರಿದರು. ಪಾಪ ಅವರ ಅಜ್ಞಾನ ಅಧ್ಯಯನದ ಕೊರತೆ.

ಲಿಂಗಾಯತ ಧರ್ಮದಲ್ಲಿ ಇಲ್ಲದ ದಾಸ್ಯತ್ವವನ್ನು ತಂದು ಭಕ್ತರನ್ನು ಗುಲಾಮರನ್ನಾಗಿ ಮಾಡಿದರು ಆಧುನಿಕ ಅಕ್ಕ ಮಾತೆ ಸ್ವಾಮಿ ಶರಣರು.

ಇದೆ ರೀತಿ ಪಂಚಾಚಾರಗಳನ್ನು ಅರಿತುಕೊಳ್ಳಬೇಕು. ಪಂಚಾಚಾರಗಳು ಸಿವಿಲ್ ಕೋಡ್ ನಾಗರೀಕ ಸಮಾಜದ ನೀತಿ ಸಂಹಿತೆಗಳು. ಷಟಸ್ಥಲಗಳನ್ನು ಕೂಡ ಆತ್ಮ ವಿಕಾಸವನ್ನು ಹಂತ ಹಂತವಾಗಿ ಪಡೆಯುತ್ತ ಭಕ್ತನೇ ಶಿವನಾಗುವ ವಿಧಾನವನ್ನು ಹಾಕಿಕೊಟ್ಟಿದ್ದಾರೆ ಶರಣರು.

ಆದರೆ ನಮ್ಮ ಮಠಾಧೀಶರು ಸ್ವಾಮಿಗಳು ಅಕ್ಕನವರು ಜಾತ್ರೆ ಉತ್ಸವ ಹಬ್ಬಗಳನ್ನು ಮಾಡುತ್ತಾ ಜನರನ್ನು ಮೌಢ್ಯತೆಗೆ ತಳ್ಳುತ್ತಾರೆ ಇದು ದುರಂತವೋ ದುರ್ದೈವವೋ ?

ಶರಣ ತತ್ವವು ಇಂದು ಸೋಲಲು ಅದರ ಜೊತೆಗೆ ಪರ್ಯಾಯವಾಗಿ ಬೆಳೆದ ಸಾಂಸ್ಥಿಕರಣದ ಸಂಪ್ರದಾಯಗಳೇ ಕಾರಣ.

ಬಸವ ಭಕ್ತರಲ್ಲಿ ನನ್ನ ವಿನಂತಿ ವಚನಗಳಲ್ಲಿ ಎಲ್ಲವೂ ದೊರೆಯುತ್ತದೆ. ಶ್ರೇಣೀಕೃತವಲ್ಲದ ಮುಕ್ತ ಸಮಾಜದ ಪರಿಕಲ್ಪನೆ ನೀಡಿ. ಆಧ್ಯಾತ್ಮಿಕ ಸಾಮಾಜಿ–ಕ ಆರ್ಥಿಕ ನೈತಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಸಮಗ್ರ ಬದಲಾವಣೆ ಬಯಸಿದರು ಶರಣ–ರು. ನೋವಿನ ಸಂಗಾತಿಯಂದರೆ ಬಸವಾದಿ ಶರಣರು ವಿರೋಧಿಸಿದ ಮೌಢ್ಯತೆಗಳನ್ನು ನಾವಿಂದು ಮಠಗಳ ಆಶ್ರಮ ಪ್ರತಿಷ್ಠಾನಗಳ ಮೂಲಕ ಮೌಲ್ಯಗಳೆಂದು ಮೆರೆಯುತ್ತಿದ್ದು ಬಸವ ತತ್ವಕ್ಕೆ ಅಪಾರವಾದ ದ್ರೋಹ ಮಾಡುತ್ತಿದ್ದೇವೆ. ಇನ್ನಾದರೂ ವಚನಗಳ ಪಚನ ಮಾಡಿಕೊಂಡು ಅಧ್ಯಯನಶೀಲತೆಗೆ ಆಧ್ಯತೆ ಕೊಡುವುದು ನಮ್ಮ ಕರ್ತವ್ಯವೆಂದು ಭಾವಿಸೋಣ. ಬನ್ನಿ ಬಸವಣ್ಣನವರು ಕಟ್ಟಿದ ಕಲ್ಯಾಣವನ್ನು ಮತ್ತೆ ಸ್ಥಾಪಿಸೋಣ ಕಾವಿ ಖಾದಿ ಹೊರತು ಪಡಿಸಿ.



ಲೇಖನ
– ಡಾ.ಶಶಿಕಾಂತ ಪಟ್ಟಣ.
ಅಧ್ಯಕ್ಷರು
ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ
ಪುಣೆ – ರಾಮದುರ್ಗ





## ವಿಜಯಪುರದಲ್ಲಿ ಖ್ಯಾತ ನೀರಾವರಿ ತಜ್ಞ ಡಾ.ಕೃಷ್ಣ ಕೋಲ್ಹಾರ ಕುಲಕರ್ಣಿ ಆಗ್ರಹ

# ಉತ್ತರ ಕರ್ನಾಟಕಕ್ಕೆ ಪ್ರತ್ಯೇಕ ಜಲ ಸಂಪನ್ಮೂಲ ಸಚಿವರು ಬೇಕು

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಉತ್ತರ ಕರ್ನಾಟಕದ ನೀರಾವರಿ ಯೋಜನೆಗಳನ್ನು ಶೀಘ್ರದಲ್ಲಿ ಮುಕ್ತಾಯಗೊಳಿಸಲು ಇಲ್ಲಿಯವರೆಗೆ ಆಡಳಿತ ಮಾಡಿದ ಯಾವುದೇ ಪಕ್ಷದ ಸರ್ಕಾರ ಇದ್ದರೂ ಕೂಡ ಮುತುವರ್ಜಿ ವಹಿಸಿಲ್ಲ ಇದರಿಂದ ವಿಜಯಪುರ – ಬಾಗಲಕೋಟ ಸೇರಿದಂತೆ ಉತ್ತರ ಕರ್ನಾಟಕದ ಭಾಗದಲ್ಲಿ ನೀರಾವರಿ ಯೋಜನೆ ಸಂಪೂರ್ಣವಾಗಿ ಜಾ–ರಿಯಾಗಿಲ್ಲ. ಇದರಿಂದ ರೈತರಿಗೆ ಕೃಷಿಗೆ ನೀರಿಲ್ಲದೇ ಪರಿತಪಿಸುವಂತಾಗಿದೆ ಎಂದು ಖ್ಯಾತ ನೀರಾವರಿ ತಜ್ಞರಾದ ಡಾ.ಕೃಷ್ಣ ಕೋಲ್ಹಾರ ಕುಲಕರ್ಣಿ ಹೇಳಿದರು.

ಮಂಗಳವಾರದಂದು ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಭವನದಲ್ಲಿ ಕೃಷ್ಣಾ ಕೊಳ್ಳ ಜಲಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ ಕರೆದಿದ್ದ ಮಾಧ್ಯಮಗೋಷ್ಠಿಯನ್ನುದ್ಧೇಶಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಮೊದಲಿನಿಂದಲೂ ಉತ್ತರ ಕರ್ನಾಟಕವನ್ನು ಕಡೆಗಣಿಸುತ್ತಾ ಬಂದಿದೆ ಒಂದು ರೀತಿ ಉತ್ತರ ಕರ್ನಾಟಕವೆಂದರೆ ರಾಜ್ಯ ಸರ್ಕಾರಕ್ಕೆ ಅಲರ್ಜಿ ಉಂಟಾಗುತ್ತದೆ ಉತ್ತರ ಕರ್ನಾಟಕದಲ್ಲಿ ಬೃಹತ್ ಜಲಾಶಯಗಳನ್ನು ನಿರ್ಮಿಸಿದ್ದರು. ಸಮರ್ಪಕವಾಗಿ ರೈತ–ರಿಗೆ ನೀರು ಕೊಡಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಅದರಲ್ಲೂ ವಿಜಯಪುರ ಜಿಲ್ಲೆ ಎಂದರೆ ಸರಕಾರ ಸಂಪೂರ್ಣ ನಿರ್ಲಕ್ಷ ಮಾಡುತ್ತಾ ಮಲತಾಯಿ ಧೋರಣೆ ಅನುಸರಿಸುತ್ತಾ ಬಂದಿದೆ ಹೀಗಾಗಿ ನಮ್ಮ ಭಾಗದಲ್ಲಿ ಸಂಪೂರ್ಣ ನೀರಾವರಿಗೆ ಆದ್ಯತೆ ನೀಡುತ್ತಿಲ್ಲ ಅದರಂತೆ ತುಂಗಭದ್ರ ಹಿಡಕಲ್ ಜಲಾಶಯ ಸೇರಿದಂತೆ ಇನ್ನೂ ಕೆಲವು ಆಣೆಕಟ್ಟುಗಳು ಉತ್ತರ ಕರ್ನಾಟಕದಲ್ಲಿ ಇವೆ ಹೀಗಿದ್ದರೂ ನಿರಂತರ ನೀರಿನಿಂದ ವಂಚಿತರಾಗಿದ್ದೇವೆ. ಮತ್ತು ಈ ಸದ ಜಲ ಸಂಪನ್ಮೂಲ ಸಚಿವ ಸ್ಥಾನವನ್ನು ದಕ್ಷಿಣ ಭಾಗದವರಿಗೆ ನೀಡಲಾಗಿದೆ ಅವರು ನಮ್ಮ ಭಾಗದ ನೀರಾವರಿ ಹಾಗೂ ರೈತರ ಸಂಕಷ್ಟದ ಬಗ್ಗೆ ಅರಿವಿಲ್ಲ ಜಲಸಂಪನ್ಮೂಲ ಸಚಿವರಾದಾಗಿನಿಂದ ಆಲಮಟ್ಟಿ ಆಣೆಕಟ್ಟಿನ ಬಗ್ಗೆ ಒಂದು ದಿನವೂ ಹೇಳಿಕೆ ನೀಡಿಲ್ಲ ಇದರಿಂದ ನಮ್ಮ ಭಾಗದ ರೈತ–ರಿಗೆ ನ್ಯಾಯ ಸಿಗುವುದು ಸಾಧ್ಯವಿಲ್ಲ ಇಡೀ ರಾಜ್ಯವನ್ನು ನಿಭಾಯಿಸುವ ಶಕ್ತಿ ಜಲಸಂಪನ್ಮೂಲ ಸಚಿವರಿಗೆ ಅಗತ್ಯವಾಗಿ ಬೇಕು. ಈ ಹಿಂದೆ ಬಿ.ಎಸ್.ಪಾಟೀಲ ಮನಗೂಳಿಯವರಿಗೆ ಉತ್ತರ ಕರ್ನಾಟಕಕ್ಕೆ ಪ್ರತ್ಯೇಕ ಜಲಸಂಪನ್ಮೂಲ ಸಚಿವ ಸ್ಥಾನವನ್ನು ನೀಡಲಾಗಿತ್ತು. ಆದರೆ ಅದು ಕೇವಲ 6 ತಿಂಗಳವರೆಗೆ ಮಾತ್ರ ನೀಡಿ ನಂತರ ಮತ್ತೆ ಸಚಿವಸ್ಥಾನವನ್ನು ಹಿಂದಕ್ಕೆ ಪಡೆದಿದ್ದಾರೆ. ಆದ್ದರಿಂದ ಈಗ ಮತ್ತೆ ಉತ್ತರ ಕರ್ನಾಟಕ ಭಾಗದ ಯಾವುದೇ ಶಾಸಕರಲ್ಲಿ ಒಬ್ಬರಿಗೆ ಜಲಸಂಪನ್ಮೂಲ ಸಚಿವ ಖಾತೆಯನ್ನು ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ಕೃಷ್ಣಾ ಕೊಳ್ಳ ಜಲ ಸಂರಕ್ಷಣಾ ಹೋರಾಟ ಸಮಿತಿ ಸಮಿತಿಯ ಮುಖಂಡರು ಹಾಗೂ ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, ಉತ್ತರ ಕರ್ನಾಟಕ್ಕೆ ಇನ್ನೊಂದು ಜಲಸಂಪನ್ಮೂಲ ಸಚಿವ ಸ್ಥಾನದ ಖಾತೆಯನ್ನು ನಮ್ಮ ಭಾಗಕ್ಕೆ ಪ್ರತ್ಯೇಕವಾಗಿ ಕೊಟ್ಟರೆ ಶೀಘ್ರವಾಗಿ ಎಲ್ಲ ನೀರಾವರಿ ಯೋಜನೆಗಳು ಮುಕ್ತಾಯಗೊಳಿಸಿ ಕೃಷಿಗೆ ಸಮರ್ಪಕವಾಗಿ ನೀರು ಕೊಡಲು ಸಾಧ್ಯವಾಗುತ್ತದೆ ಎಂದರು.



## 108 ಬಾರಿ ರಾಘವೇಂದ್ರಸ್ವಾಮಿಗಳ ಅಷ್ಟೋತ್ತರ ಪಾರಾಯಣ

ಕಲಬುರಗಿ : ನಗರದ ನ್ಯೂ ರಾಘವೇಂದ್ರ ಕಾಲೋನಿಯಲ್ಲಿ ಸೋಮವಾರ ಶ್ರೀ ರಾಘವೇಂದ್ರ ಗುರು ಸಾರ್ವಭೌಮರ ಉತ್ತರ ಆರಾಧನೆ ಪ್ರಯುಕ್ತ ಶ್ರೀ ಸತ್ಯಾನಂದ ಪಾರಾಯಣ ಸಂಘದ ಭೀಮಭಟ್ಟ ಜೋಶಿ ಅವರ ಮನೆಯಲ್ಲಿ 108 ಬಾರಿ ಶ್ರೀರಾಘವೇಂದ್ರಸ್ವಾಮಿಗಳ ಅಷ್ಟೋತ್ತರ ಪಾರಾಯಣ ಮಾಡಲಾಯಿತು. ಈ ಸಂದರ್ಭದಲ್ಲಿ ಪಂ. ಪ್ರಸನ್ನ ಆಚಾರ್ಯ ಜೋಶಿ ಅವರು ಪ್ರವಚನ ನೀಡಿದರು. ಈ ಸಂದರ್ಭದಲ್ಲಿ ಭೀಮಭಟ್ಟ ಜೋಶಿ, ಪಿಎನ್ ಜೋಶಿ, ರಾಘವೇಂದ್ರ ಆಚಾರ್ಯ ಬಬ್ಲಾದ್, ಲಕ್ಷ್ಮಿಕಾಂತ್‌ರಾವ್ ಅಮೂಲ್ ಬಾಡಿಗೆ ವಿಕ್ರಂ ಕುಲಕರ್ಣಿ, ಗುರುರಾಜ್ ಕುಲಕರ್ಣಿ, ವಿಜಯಕುಮಾರ್ ಕೀಲಿ, ವಸಂತರಾವ್, ಮನೋಹರ್ ರಾವ್, ಆನಂದ ಕುಂಚೂರು, ರಾಘವೇಂದ್ರ ದೇಸಾಯಿ, ಶ್ರೀನಿವಾಸ್ ಕುಲಕರ್ಣಿ, ಶ್ರೀನಿವಾಸ ಆಚಾರ್ಯ ಜೋಶಿ ನೆಲೋಗಿ ಹಾಗೂ ಪಾರಾಯಣ ಸಂಘದ ಸಕಲ ಸದಸ್ಯರು ಉಪಸ್ಥಿತರಿದ್ದರು.



## ಈ ಜಾತ್ರೆಯಲ್ಲಿ ಬೇವಿನ ಎಲೆಯ ಮೇಲೆಯೇ ಭಕ್ತರಿಗೆ ಪ್ರಸಾದ

ಕಲಬುರಗಿ : ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನಿಂದ 13 ಕಿ.ಮೀ ದೂರದ ಚಾಂದಕವಟೆ ಗ್ರಾಮದಲ್ಲಿ ಪರಮಾನಂದ ದೇವಸ್ಥಾನದಲ್ಲಿ ಪ್ರತಿ ವರ್ಷ ಶ್ರಾವಣ ಮಾಸದ ಮೂರನೇ ಸೋಮವಾರ ಪರಮಾನಂದ ದೇವರ ಜಾತ್ರೆ ಬಹು ವಿಜೃಂಭಣೆಯಿಂದ ನಡೆಯುತ್ತದೆ ಗ್ರಾಮದ ಹೊರವಲಯದಲ್ಲಿ 3 ಕಿ.ಮೀ ದೂರದಲ್ಲಿರುವ ಈ ದೇವಸ್ಥಾನಕ್ಕೆ ದೂರದ ಭಕ್ತರು ಆಗಮಿಸುವರು.

ಜಾತ್ರೆಗೆ ಆಗಮಿಸುವ ಭಕ್ತಾದಿಗಳು ಕಡ್ಡಾಯವಾಗಿ ಬೇವಿನ ಎಲೆಯ ಮೇಲೆ ಪ್ರಸಾದ ಸೇವಿಸಿದರು. ಪ್ರಸಾದಕ್ಕಾಗಿ ಬೇವಿನ ಎಲೆಯನ್ನು ತಟ್ಟೆಯ ರೀತಿ ಬಳಸಿ ಅವುಗಳಲ್ಲಿ ಚಪಾತಿ,ಸಜ್ಜೆ ಕಡುಬು, ಕಿಚಡಿ ,ಅನ್ನ, ಸಾಂಬಾರು ಹಾಗೂ ಇತರೇ ಪದಾರ್ಥಗಳನ್ನು ಇಲ್ಲಿ ಬಡಿಸಲಾಗುತ್ತದೆ.ಸಾವಿರಾರು ಜನರು ಜಾತಿ ಭೇದವಿಲ್ಲದೇ ಪ್ರಸಾದ ಸವಿದು ಪುನೀತರಾಗುವರು. ಇದು ಹಲವಾರು ವರ್ಷಗಳಿಂದಲೂ ನಡೆದು ಬಂದ ಈ ಪದ್ಧತಿ. ಇಂದಿಗೂ ಮುಂದುವರೆಸಿದ್ದಾರೆ.

ಬೇವು ಆಯುರ್ವೇದ ಜಗತ್ತಿಗೆ ಮೂಲ ವಸ್ತು.ಯಾವದೇ ದೇವಸ್ಥಾನಗಳಲ್ಲಿನ ಆ ಚರಣೆಗಳನ್ನು ವೈಜ್ಞಾನಿಕ ಹಿನ್ನಲೆಯಲ್ಲಿ ಪರಾಮರ್ಶೆಗೆ ಒಳಪಡಿಸಿದಾಗ ಸತ್ಯಾಸತ್ಯತೆಯ ಅರಿವಾಗುವದರೊಂದಿಗೆಸಂಸ್ಕೃತಿಯಉಳಿವಾಗುತ್ತದೆ.

## ಅನ್ನ ಜ್ಞಾನಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದ ಡಾ.ಅಪ್ಪ



ಕಲಬುರಗಿ : 'ಜ್ಞಾನ ದಾಸೋಹ' ಮತ್ತು 'ಅನ್ನ ದಾಸೋಹ'ಗಳೆ ಪೂಜ್ಯ ಡಾ.ಶರಣಬಸವಪ್ಪ ಅವರ ಪ್ರಮುಖ ಕಾಯಕಗಳಾಗಿದ್ದವುಎಂದುಗೋದುತಾಯಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ.ಕಲ್ಪನಾ ಭೀಮಳ್ಳಿ ಅವರು ಹೇಳಿದರು.

ಅಖಿಲ ಭಾರತ ಶಿವಾನುಭವ ಮಂಟಪ ಶರಣಬಸವೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ 40 ದಿನಗಳ ಉಪನ್ಯಾಸ ಮಾಲಿಕೆಯಲ್ಲಿ ಸೋಮವಾರ ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರ ಜ್ಞಾನ ಅನ್ನ ದಾಸೋಹ ವಿಷಯ ಕುರಿತು ಮಾತನಾಡಿ,

ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರು ಶಿಕ್ಷಣ ಕ್ಷೇತ್ರವನ್ನು ಸಮಾಜ ಸೇವೆಯ ಪ್ರಮುಖ ಮಾಧ್ಯಮವೆಂದು ಪರಿಗಣಿಸಿದರು. ಶಾಲೆ, ಕಾಲೇಜು ಹಾಗೂ ವಿವಿಧ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ಅಭಿವೃದ್ಧಿಯ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳ ಜೀವನದಲ್ಲಿ ಜ್ಞಾನದ ಬೆಳಕು ಹರಡುವ ಕಾರ್ಯಕ್ಕೆ ಪ್ರೇರಣೆ ನೀಡಿದರು. ಅವರ ಶಿಕ್ಷಣದ ಪರಿಕಲ್ಪನೆಯಲ್ಲಿ "ಜ್ಞಾನವು ವ್ಯಕ್ತಿಯ ಬದುಕನ್ನು ಬೆಳಗಿಸುವ ದೀಪ, ಅದನ್ನು ಎಲ್ಲರಿಗೂ ಹಂಚುವುದು ನಿಜವಾದ ದಾಸೋಹ."ಎಂಬ ಭಾವನೆ ಅಡಕವಾಗಿದೆ.

ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರ ಚಿಂತನೆಯ ಪ್ರಕಾರ, ಹಸಿವು ನಿವಾರಿಸದೆ ಮಾನವನ ಅಭಿವೃದ್ಧಿಯನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಹೊಟ್ಟೆ ತುಂಬಿದಾಗ ಮಾತ್ರ ವ್ಯಕ್ತಿಯು ಶಿಕ್ಷಣ, ಚಿಂತನೆ ಮತ್ತು ಸಾಧನೆಯತ್ತ ಗಮನಹರಿಸಬಹುದು.

ಜ್ಞಾನ ದಾಸೋಹ ಮತ್ತು ಅನ್ನ ದಾಸೋಹ ಪರಸ್ಪರ ಪೂರಕವಾದವುಗಳಾಗಿವೆ. ಅನ್ನವು ದೇಹವನ್ನು ಪೋಷಿಸಿದರೆ, ಜ್ಞಾನವು ಮನಸ್ಸನ್ನು ಮತ್ತು ಬುದ್ಧಿಯನ್ನು ಪೋಷಿಸುತ್ತದೆ.

ಹಸಿದ ವ್ಯಕ್ತಿಗೆ ಮೊದಲು ಅನ್ನದ ಅವಶ್ಯಕತೆ ಇದೆ. ಆದರೆ ಬದುಕಿನಲ್ಲಿ ಪ್ರಗತಿ ಸಾಧಿಸಲು ಜ್ಞಾನದ ಅಗತ್ಯವಿದೆ. ಆದ್ದರಿಂದ ಅಪ್ಪ ಅವರ ದಾಸೋಹ ಚಿಂತನೆಯು ಮಾನವನ ದೈಹಿಕ ಮತ್ತು ಬೌದ್ಧಿಕ ಅಭಿವೃದ್ಧಿ ಎರಡಕ್ಕೂ ಸಮಾನ ಮಹತ್ವ ನೀಡುತ್ತದೆ.

ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರ ಜ್ಞಾನ ಅನ್ನ ದಾಸೋಹದ ಪರಿಕಲ್ಪನೆ ಮಾನವೀಯತೆ, ಸಮಾನತೆ ಮತ್ತು ಸಮಾಜ ಸೇವೆಯ ಮಹಾನ್ ಸಂದೇಶವಾಗಿದೆ. ಅನ್ನದ ಮೂಲಕ ದೇಹದ ಹಸಿವನ್ನು ನೀಗಿಸಿ, ಜ್ಞಾನದ ಮೂಲಕ ಅಜ್ಞಾನದ ಕತ್ತಲೆಯನ್ನು ದೂರ ಮಾಡುವುದೇ ಈ ದಾಸೋಹದ ಮೂಲ ಉದ್ದೇಶವಾಗಿದೆ. "ಅನ್ನದಿಂದ ಜೀವ ಉಳಿಯುತ್ತದೆ, ಜ್ಞಾನದಿಂದ ಜೀವನ ಬೆಳಗುತ್ತದೆ" ಎಂಬ ಸಂದೇಶವನ್ನು ಅವರ ದಾಸೋಹ ಚಿಂತನೆ ಸಾರುತ್ತದೆ ಎಂದು ಹೇಳಿದರು.

## ಅಬಕಾರಿ ಅಧಿಕಾರಿಗಳ ಕೌನ್ಸಲಿಂಗ್ ವರ್ಗಾವಣೆ ತಡೆ ಖಂಡನೀಯ



ಕಲಬುರಗಿ: ರಾಜ್ಯ ಸರ್ಕಾರವು ತನ್ನ 2026-27 ನೇ ಸಾಲಿನ ಆಯವ್ಯಯ ಮಂಡನೆಯ ಕಾಲಕ್ಕೆ ಅಬಕಾರಿ ಇಲಾಖೆಯಲ್ಲಿ ಪಾರದರ್ಶಕತೆಯನ್ನು ಇನ್ನಷ್ಟು ಹೆಚ್ಚಿಸುವ ಸಂಬಂಧದಲ್ಲಿ ಅಬಕಾರಿ ಉಪ ಅಧೀಕ್ಷಕರು, ಹಾಗೂ ಅಬಕಾರಿ ಅಧೀಕ್ಷಕರುಗಳ ವರ್ಗಾವಣೆಯನ್ನು ಡಿಜಿಟಲ್ ಕೌನ್ಸಲಿಂಗ ಮುಖಾಂತರ ಮಾಡಲಾಗುವುದು ಎಂದು ಘೋಷಣೆ ಮಾಡಲಾಗಿತ್ತು.ಕರ್ನಾಟಕ ರಾಜ್ಯ ಸರ್ಕಾರಿ ನೌಕರರ 2026-27 ನೇ ಸಾಲಿನ ವರ್ಗಾವಣೆ ಅವಧಿ ಸದ್ಯ ಮುಗಿದಿದ್ದು, ಇಲ್ಲಿಯವರೆಗೆ ಅಬಕಾರಿ ಇಲಾಖೆಯಲ್ಲಿ ಪ್ರಸ್ತುತ ಸಾಲಿನಲ್ಲಿ ಯಾವುದೇ ವೃಂದದಲ್ಲಿ ಸಾರ್ವತ್ರಿಕ ವರ್ಗಾವಣೆ ಆಗದೇ ಇರುವುದಕ್ಕೆ ಇರುವ ಕಾರಣಗಳೇನು ? ಎಂದು ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ. ಎಸ್ ಪಾಟೀಲ ನರಿಬೋಳ ಪ್ರಶ್ನಿಸಿದ್ದಾರೆ. ಅಬಕಾರಿ ಅಧಿಕಾರಿಗಳ ಕೌನ್ಸಲಿಂಗ್ ವರ್ಗಾವಣೆಯನ್ನು ತಡೆ ಹಿಡಿದ ಕಾರಣಕ್ಕೆ ಖಂಡನೆ ವ್ಯಕ್ತಪಡಿಸಿದ್ದಾರೆ. ಕೌನ್ಸಲಿಂಗ್ ವರ್ಗಾವಣೆಗೆ ತಡೆಹಿಡಿಯುವ ಕುತಂತ್ರ ನಡೆಯುತ್ತಿರೋದು ಆಘಾತಕಾರಿ ಬೆಳವಣಿಗೆ. ಅಬಕಾರಿ ಇಲಾಖೆಯಲ್ಲಿ ಇಲ್ಲಿಯವರೆಗೆ ಕಲ್ಯಾಣ ಕರ್ನಾಟಕ ಭಾಗದ ಅಧಿಕಾರಿಗಳ ವರ್ಗಾವಣೆಯಲ್ಲಿ ಪೋಸ್ಟಿಂಗನಲ್ಲಿ ಸೂಕ್ತಸ್ಥಾನಮಾನ ಪಡೆಯುವಲ್ಲಿ ಅನ್ಯಾಯಕ್ಕೆ ಒಳಗಾಗಿದ್ದಾರೆ. ಇವರ ಸಮಸ್ಯೆಗಳಿಗೆ ಸ್ಪಂದಿಸಬೇಕಾದ ಜನಪ್ರತಿನಿದಿಗಳ ನಿರ್ಲಕ್ಷ ಖಂಡನೀಯ. ಕೌನ್ಸಲಿಂಗ ನಡೆಸಿದರೆ ಶಾಸಕರ ಶಿಫಾರಸ್ಸಿನ ಪತ್ರಗಳು ಬೇಕಾಗುವದಿಲ್ಲ. ಇದರಿಂದ ಶಾಸಕರಿಗೆ ವರ್ಗಾವಣೆಯಿಂದ ಬರುವ ಆದಾಯ ತಪ್ಪುತ್ತದೆ ಅಲ್ಲವೇ? ಬೆಂಗಳೂರು ಸುತ್ತಮುತ್ತಲಿನ ಒಬ್ಬೊಬ್ಬ ಅಧಿಕಾರಿ ಅನಾಮಧೇಯರ ಹೆಸರಲ್ಲಿ 10-15 ವೈನ್ ಶಾಲೆಗಳ ಲೈಸನ್ಸ ಪಡೆದು ವ್ಯಾಪಾರಕ್ಕಿಳಿದಿದ್ದಾರೆ ಎನ್ನುವ ಮಾತು ಜಗಜ್ಜಾಹೀರಾಗಿರುವಂತಹದು. ಇದರ ಕುರಿತು ಉನ್ನತ ಮಟ್ಟದ ತನಿಖೆ ಆಗಲಿ. ಕೌನ್ಸಲಿಂಗ ತಡೆ ಹಿಡಿಯದೆ ತಕ್ಷಣ ಜಾರಿಗೆ ತರಲಿ. ನಿರ್ಲಕ್ಷ ಮಾಡಿದರೆ ಉಗ್ರ ಹೋರಾಟ ಅನಿವಾರ್ಯ ಎಂದು ನರಿಬೋಳ ತಿಳಿಸಿದ್ದಾರೆ.

# ಇಂಡಿ: ಬಿಜೆಪಿಯಿಂದ ಮುಂದುವರೆದ ಧರಣಿ ಸತ್ಯಾಗ್ರಹ

■ ಉದಯರಶ್ಮಿ ದಿನಪತ್ರಿಕೆ




ಇಂಡಿ: ತಾಲೂಕನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಿಸಬೇಕು ಆಗ್ರಹಿಸಿ ನಗರದ ಬಸವೇಶ್ವರ ವೃತ್ತದಲ್ಲಿ ಬಿಜೆಪಿ ಯುವ ಮೋರ್ಚಾ ನೇತೃತ್ವದಲ್ಲಿ ಬಿಜೆಪಿ ಪಕ್ಷದ ವತಿಯಿಂದ ಧರಣಿ ಸತ್ಯಾಗ್ರಹ ಮುಂದುವರೆದಿದೆ.

ಮಂಗಳವಾರ ಮಹಿಳಾ ಬಿಜೆಪಿ ಕಾರ್ಯಕರ್ತೆಯರು ಪಾಲ್ಗೊಂಡು ತಮ್ಮ ಬೆಂಬಲ ಸೂಚಿಸಿದರು.

ಮಹಿಳಾ ಮೋರ್ಚಾ ಅಧ್ಯಕ್ಷೆ ಬಸಮ್ಮ ಮರಡಿ, ವಿಜಯಲಕ್ಷ್ಮಿ ರೂಗಿಮಠ, ಗೀತಾ ರಾಠೋಡ, ಸುಧಾ ಕುಂಬಾರ, ಅಶ್ವಿನಿ ಕೊಟಗೊಂಡ ಶ್ರೀದೇವಿ ಕುಲಕಣಿ, ಶ್ರೀದೇವಿ ನಾವಿ ಮಾತನಾಡಿ, ಜಿಲ್ಲೆಯ ವಿಜಯಪುರ, ಕೋಲಾರ ಮತ್ತು ನಿಡಗುಂದಿ ತಾಲೂಕುಗಳನ್ನು ಬರ ಪೀಡಿತ ತಾಲೂಕು ಗಳಾಗಿ ಘೋಷಿಸಿರುವದು ಹಿನ್ನೆಲೆಯಲ್ಲಿ ಭೌಗೋಳೀಕವಾಗಿ ಸಮೀಪದಲ್ಲಿರುವ ಹಾಗೂ ಸಮಾನ ಹವಾಮಾನ ಪರಿಸ್ಥಿತಿಗಳನ್ನು ಹೊಂದಿರುವ ಇಂಡಿ ತಾಲೂಕಿನಲ್ಲಿ ಮಳೆಯ ಕೊರತೆ ಮತ್ತು ಕೃಷಿ ಪರಿಸ್ಥಿತಿಯನ್ನು ಪ್ರತ್ಯೇಕವಾಗಿ ಮರುಪ-ರಿಶೀಲಿಸುವದು ಅಗತ್ಯವಾಗಿದೆ. ಇಂಡಿ ತಾಲೂಕಿನ ರೈತರು ಎದುರಿಸುತ್ತಿರುವ ಬೆಳೆ ಪರಿಸ್ಥಿತಿ ಮಣ್ಣಿನ ತೇವಾಂಶ ಕೊರತೆ ಬಿತ್ತನೆ ಹಾಗೂ ಬೆಳೆ ಸ್ಥಾಪನೆಯ ಮೇಲಿನ ಪರಿಣಾಮ ಮತ್ತು ಸ್ಥಳೀಯವಾಗಿ ಕಂಡು ಬಂದಿರುವ ಒಣಹವೆಯ ಅವಧಿಗಳನ್ನು ಪರಿಗಣಿಸಿ ತಾಲೂಕನ್ನು ಪರಿಗಣಿಸಬೇಕು ಎಂದರು.

ಮಂಡಲ ಅಧ್ಯಕ್ಷ ಹಣಮಂತರಾಯಗೌಡ ಪಾಟೀಲ, ಕಾಸುಗೌಡ ಬಿರಾದಾರ, ಮಲ್ಲಿಕಾರ್ಜುನ ಕಿವಡೆ, ಶೀಲವಂತ ಉಮರಾಣಿ, ದೇವೆಂದ್ರ ಕುಂಬಾರ, ಶಂಕರಗೌಡ ಪಾಟೀಲ, ಬಾಳು ಮುಳಜಿ, ಅನೀಲ ಜಮಾದಾರ, ಅನೀಲಗೌಡ ಬಿರಾದಾರ, ಸಂತೋಷ ಪಾಟೀಲ, ರಾಮಸಿಂಗ ಕನ್ನೊಳ್ಳಿ, ಮಹೇಶ ಹೂಗಾರ, ಮಲ್ಲು ಗುಡ್ಲ, ರಾಜಕುಮಾರ ಸಗಾಯಿ, ಶಿವಯೋಗಿ ರೂಗಿಮಠ, ಪ್ರಶಾಂತ ಗವಳಿ, ಪ್ರಶಾಂತ ಲಾಳಸಂಗಿ, ಮಂಜು ದೇವರ, ಶ್ರೀಶೈಲಗೌಡ ಪಾಟೀಲ, ಮಲ್ಲು ಪಡನೂರ ಈರಣ್ಣಗೌಡ ಪಾಟೀಲ, ಜೆಟ್ಟು ಮರಡಿ, ಮಹೇಶ ಹೂಗಾರ ಮತ್ತಿತರಿದ್ದರು.

### ವಿಜಯಪುರ ಜಿಲ್ಲೆಯ ಮತದಾರರಿಗೆ ಜಿಲ್ಲಾಧಿಕಾರಿ ಡಾ.ಆನಂದ್ ಕೆ ಮನವಿ

# ಕರಡು ಮತದಾರರ ಪಟ್ಟಿ ಪರಿಶೀಲಿಸಿಕೊಳ್ಳಿ : ಡಿಸಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ-2026 (ಎಸ್‌ಐಆರ್) ಕರಡು ಮತದಾರರ ಪಟ್ಟಿಯನ್ನು ಎಲ್ಲ ತಹಶೀಲ್ದಾರರ ಕಚೇರಿ ಹಾಗೂ ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಪ್ರಕಟಿಸಲಾಗಿದ್ದು, ಸಾರ್ವಜನಿಕರು ಕರಡು ಮತದಾರರ ಪಟ್ಟಿಯನ್ನು ಪರಿಶೀಲಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ತಿಳಿಸಿದ್ದಾರೆ.

ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ ಆ. 24 ರಂದು ಕರಡು ಮತದಾರರ ಪಟ್ಟಿಯನ್ನು ಜಿಲ್ಲೆಯ ಎಲ್ಲ ತಹಶೀಲ್ದಾರರ ಕಚೇರಿ ಹಾಗೂ ಗ್ರಾಮ ಪಂಚಾಯತಿ ಕಚೇರಿಗಳಲ್ಲಿ ಪ್ರಕಟಪಡಿಸಲಾಗಿದೆ. ಜೊತೆಗೆ ನಿಮ್ಮ ಮತಕ್ಷೇತ್ರ ವ್ಯಾಪ್ತಿಯ ಮತಗಟ್ಟೆ ಅಧಿಕಾರಿಗಳ ಬಳಿ ಇರುವ ಕರಡು ಮತದಾರರ ಪಟ್ಟಿಯನ್ನು ಪರಿಶೀಲಿಸಬಹುದಾಗಿದೆ ಎಂದವರು ತಿಳಿಸಿದ್ದಾರೆ.

ಜೊತೆಗೆ ಚುನಾವಣಾ ಆಯೋಗದ https://voters.eci.gov.in/download-eroll ಮತ್ತು ಜಿಲ್ಲಾ ವೆಬ್ ಪೋರ್ಟಲ್ https://vijayapura.nic.in/en/ ದಲ್ಲಿಯೂ ಸಹ ಕರಡು ಮತದಾರರ ಪಟ್ಟಿಯನ್ನು ಪರಿಶೀಲಿಸಬಹುದಾಗಿದೆ ಎಂದವರು ತಿಳಿಸಿದ್ದಾರೆ.

ಒಂದು ವೇಳೆ ಅರ್ಹ ಮತದಾರರ ಹೆಸರು ಪ್ರಕಟಿಸಿರುವ ಕರಡು ಮತದಾರರ ಪಟ್ಟಿಯಲ್ಲಿ ಬಾರದೇ ಇದ್ದಲ್ಲಿ, ಯಾವುದಾದರೂ ಹಕ್ಕು ಮತ್ತು ಆಕ್ಷೇಪಣೆಗಳಿದ್ದಲ್ಲಿ ಸೆ.23 ರವರೆಗೆ ನಿಮ್ಮ ಮತಕ್ಷೇತ್ರದ ವ್ಯಾಪ್ತಿಯ ಮತದಾರರ ನೋಂದಣಾಧಿಕಾರಿಗಳಿಗೆ ಮತ್ತು ತಹಶೀಲ್ದಾರರ ಕಚೇರಿಗೆ ಸಲ್ಲಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದೇ ಇರುವ ಯಾವುದೇ ಅರ್ಹ ಮತದಾರರು ಬರುವ ಅಕ್ಟೋಬರ್ 01-2026 ಕ್ಕೆ 18 ವರ್ಷ ತುಂಬುವ ಯುವ ಮತದಾರರು ನಮೂನೆ-6 ಅನ್ನು ಸಂಬಂಧಿಸಿದ ತಹಶೀಲ್ದಾರರ ಕಚೇರಿಗೆ, ತಮ್ಮ ಮತಕ್ಷೇತ್ರದ ವ್ಯಾಪ್ತಿಯ ಮತಗಟ್ಟೆ ಅಧಿಕಾರಿಗಳಿಗೆ ಭರ್ತಿ ಮಾಡಿ ಸಲ್ಲಿಸುವ ಮೂಲಕ ಮತ್ತು Voter Service Portal, https://voters.eci.gov.in/ ಮೂಲಕ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಿಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಿಎಸ್ಐ ಅಂಗಡಿ ನಿಷ್ಠಾವಂತ ಸೇವೆಗೆ ಹೃದಯಪೂರ್ವಕ ವಿದಾಯ

■ ಉದಯರಶ್ಮಿ ದಿನಪತ್ರಿಕೆ



ಆಲಮೇಲ: ಆಲಮೇಲದಲ್ಲಿ ಎರಡು ವರ್ಷ ಸೇವೆ ಸಲ್ಲಿಸಿರುವುದು ತೃಪ್ತಿ ತಂದಿದ್ದು, ಈ ಪ್ರದೇಶ ನಿಜಕ್ಕೂ ಮತೀಯ ಸಾಮರಸ್ಯ, ಕೋಮು ಸೌಹಾರ್ದತೆಯ ಪ್ರತೀಕ ವಾಗಿದೆ ಎಂದು ನಿರ್ಗಮಿತ ಪಿಎಸ್ ಅರವಿಂದ ಅಂಗಡಿ ಅಭಿಪ್ರಾಯ ಪಟ್ಟರು.

ಪಟ್ಟಣದ ಐ ಜೆ ರಾಯಲ್ ಫಂಕ್ಷನ್ ಹಾಲ್ ನಲ್ಲಿ ಜರುಗಿದ ವರ್ಗಾವಣೆಗೊಂಡ ಪಿಎಸ್ ಮತ್ತು ಸಿಬ್ಬಂದಿಗಳ ಬಿಳ್ಕೊಡುವ ಮತ್ತು ನೂತನ ಪಿಎಸ್‌ರ ಸ್ವಾಗತ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಸಮಾರಂಭದಲ್ಲಿ ಆಲಮೇಲ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಶೋಕಗೌಡ ಎಂ ಕೋಳಾರಿ ಅವರು ನಿರ್ಗಮಿತ ಪಿಎಸ್ ಅರವಿಂದ್ ಅಂಗಡಿ ಅವರಿಗೆ 'ಆದರ್ಶ ಸೇವಾ ಪುರಸ್ಕಾರ' ಪ್ರದಾನ ಮಾಡಿ ಶುಭಕೋರಿದರು. ವೈದ್ಯ ಸಾಹಿತಿ ಡಾ ಸಮೀರ್ ಹಾದಿಮನಿ ಮಾತನಾಡಿ, ದಕ್ಷ ಪೊಲೀಸ್ ಅಧಿಕಾರಿಗೆ ನಿಷ್ಠೆ, ನಿರ್ಭೀತತೆ ಮತ್ತು ನ್ಯಾಯಪರತೆಗಳೇ ಆಭರಣವಾಗಿದ್ದು, ಪಿಎಸ್ ಅರವಿಂದ್ ಅಂಗಡಿಯವರು ಕಾನೂನು ಸುವ್ಯವಸ್ಥೆ ಕಾಪಾಡುವುದರ ಜೊತೆಗೆ ಆಲಮೇಲ ಭಾಗದಲ್ಲಿ ಜರುಗುವ ವಿವಿಧ ಧರ್ಮ ಜಾತಿ ಸಮುದಾಯಗಳ, ಹಬ್ಬ ಜಾತ್ರೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಜನಾನುರಾಗಿದ್ದರು ಎಂದರು. ಅರ್ಬನ್ ಬ್ಯಾಂಕ್ ಅಧ್ಯಕ್ಷ ಶಿವಕುಮಾರ್ ಗುಂದಗಿ, ಯಶವಂತರಾಯಗೌಡ ರೂಗಿ, ಕಸಾಪ ಅಧ್ಯಕ್ಷ ಶಿವಶರಣ ಗುಂದಗಿ ಮಾತನಾಡಿದರು.

ವೇದಿಕೆ ಮೇಲೆ ಸಿಂದಗಿ ಸರ್ಕಲ್ ಇನ್ಸ್ಪೆಕ್ಟರ್ ಸುನಿಲ್ ಮೂಲಿಮನಿ, ಕಾಡಪ್ಪ ಜಕ್ಕಣ್ಣವರ, ಅನಿಲ ಮುನವಳ್ಳಿ, ಎಸ್ ಕೆ ವಾಘಮೊರೆ ಉಪಸ್ಥಿತರಿದ್ದರು. ಪಟ್ಟಣ ಪಂಚಾಯತ್ ಅಧ್ಯಕ್ಷ ಉಮರ್ ಬಿಳವಾರ, ಮಾಜಿ ಜಿಪಂ ಸದಸ್ಯ ಚಂದ್ರಶೇಖರ ನಾಗೂರ್, ಬಸವರಾಜ್ ತಾವರಗೇರೆ, ಅಯುಬ್ ದೇವರಮನಿ, ಸಿದ್ದಲಿಂಗ ಸುಬೇದಾರ್, ಜೈ ಭೀಮ್ ನಾಯ್ಕೋಡಿ, ಬಸವರಾಜ್ ತೆಲ್ಲೂರ, ವಿವಿಧ ಕನ್ನಡಪರ ಮತ್ತು ದಲಿತ ಸಂಘಟನೆಯ ಪದಾಧಿಕಾರಿಗಳು, ಪೊಲೀಸ್ ಠಾಣೆಯ ಸಿಬ್ಬಂದಿ, ಗ್ರಾಮಗಳ ಮುಖಂಡರು ಭಾಗವಹಿಸಿದ್ದರು.

# ಸಮಾನತೆಯ ಹರಿಕಾರ ಬಸವಣ್ಣ:ಕಾವ್ಯಶ್ರೀ



ಕಲಬುರಗಿ :ಬಸವಣ್ಣನವರು ಎಲ್ಲ ಜಾತಿಯವರನ್ನು,ಸ್ತ್ರೀಯರನ್ನೂ ಸಮಾನತೆಯ ನೆರಳಲ್ಲಿ ಪೊಷಿಸಿ 12ನೇ ಶತಮಾನದಲ್ಲೆ ವಿಶ್ವ ಮಾನವತಾವಾದದ, ಸಮಾನತೆಯ ಹರಿಕಾರರಾಗಿದ್ದಾರೆ ಎಂದು ಡಾ. ಕಾವ್ಯಶ್ರೀ ಮಹಾಗಾಂವಕರ್ ಹೇಳಿದರು.

ನಗರದ ಪುಸ್ತಕ ಉದ್ಯಮಿ ಹಾಗೂ ಪ್ರಕಾಶಕರಾದ ಡಾ. ಬಸವರಾಜ ಕೊನೇಕ್ ಅವರ ಮನೆಯಲ್ಲಿ ಶ್ರಾವಣ ಮಾಸದ ಪ್ರಯುಕ್ತ ರಾಷ್ಟ್ರೀಯ ಬಸವ ದಳದ ವತಿಯಿಂದ ಏರ್ಪಡಿಸಿದ್ದ ಮನೆಯಲ್ಲಿ ಮಹಾಮನೆ ಕಾರ್ಯಕ್ರಮದಲ್ಲಿ ಬಸವಣ್ಣನವರ ಜೀವನ ಮತ್ತು ಆದರ್ಶಗಳು ಕುರಿತು ಸೋಮವಾರ ಉಪನ್ಯಾಸ ನೀಡಿದರು.


ಈಗಿನ ಯುವ ಶಕ್ತಿ ಮತ್ತು ಸಮಾಜ ಬಸವಣ್ಣ ಹಾಗೂ ಇತರ ಶಿವಶರಣರ ವಚನ ಸಾಹಿತ್ಯ ಅಧ್ಯಯನ ಮಾಡಬೇಕು. ಸಮಾನತೆಯ ಸಂಸ್ಕಾರಯುತ ಸಮಾಜ ಕಟ್ಟಲು ಮುಂದಾಗಬೇಕೆಂದರು.

ಮುಖ್ಯ ಅತಿಥಿಗಳಾದ ಪ್ರೊ. ಶಿವರಾಜ ಪಾಟೀಲ ಮಾತನಾಡಿ ಪರಿಸರ ಆರಾಧನೆ ಮತ್ತು ಕಾಯಕ ದಾಸೋಹಗಳು ಮಾನವನ ಸಂಬಂಧಗಳನ್ನು ಗಟ್ಟಿಗೊಳಿಸುತ್ತವೆ. ಬಸವಣ್ಣನವರ ವಚನಗಳಲ್ಲಿ ಇವುಗಳನ್ನು ಕಾಣಬಹುದು. ಏಕ ದೇವ ಉಪಾಸನೆ, ದೇವನೊಬ್ಬ ನಾಮ ಹಲವು, ದಯವೇ ಧರ್ಮದ ಮೂಲ ಇವು ಬಸವಣ್ಣನವರ ವಿಶ್ವ ವಾಕ್ಯಗಳಾಗಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ. ಬಸವರಾಜ ಕೊನೇಕ ಮಾತನಾಡಿ, ಶಿವಶರಣರ ವಿಚಾರಗಳು ಆದರ್ಶದ ಮೌಲ್ಯ ಹೊಂದಿವೆ. ಇವುಗಳನ್ನು ಶ್ರಾವಣ ಮಾಸದಲ್ಲಿ ಶ್ರವಣಮಾಡುವುದರಿಂದ ಉತ್ತಮ ಆಲೋಚನೆ ಬರಲಿದೆ ಎಂದರು

ಕಾರ್ಯಕ್ರಮದಲ್ಲಿ ಡಾ. ಚಿ ಸಿ ನಿಂಗಣ್ಣ, ಡಾ. ಶ್ರೀಶೈಲ್ ನಾಗರಾಳ್, ಡಾ. ಶರಣಬಸಪ್ಪ ವಡ್ಡನಕೇರಿ, ವಿಜಯಕುಮಾರ ಮೇಳಕುಂದಿ, ಸರೋಜಾ ಬಿರಾದಾರ,ಪೃಥ್ವಿರಾಜ ಧನಶೆಟ್ಟಿ, ಸಿದ್ದಣ್ಣ ಜವಳಗಿ, ವಿಜಯಕುಮಾರ ಹಂಚಿನಾಳ, ಶಾಂತಲಿಂಗ ಭುಜ-ರ್ಕೆ ಪ್ರೀತಿ ಕೊನೇಕ್,ಶೈಲಜಾ ಕೊನೇಕ್,ಲಕ್ಷ್ಮಿ ಕೊನೇಕ್, ಜಯಶ್ರೀ ಕೊನೇಕ್, ಉಪ್ಥಿತರಿದ್ದರು. ವಚನ ಹಾಗೂ ಶ್ಲೋಕ ಪ್ರಾರ್ಥಿಸಿದರೆ, ಸಿದ್ದಲಿಂಗ ಕೊನೇಕ್ ಸ್ವಾಗತಿಸಿದರು ಶರಣು ಕೊನೇಕ್ ವಂದಿಸಿದರು.

# ಶಾಸಕ ಎಂ.ವೈ.ಪಾಟೀಲ ಭ್ರಷ್ಟ ಎಂದು ಹೇಳಿರುವ ನಾಟೀಕಾರ ಹೇಳಿಕೆಗೆ ಬ್ಲಾಕ್ ಕಾಂಗ್ರೆಸ್ ಖಂಡನೆ




ಅಫಜಲಪುರ ; ಜನಪ್ರಿಯ ಶಾಸಕ ಎಂ.ವೈ.ಪಾಟೀಲ ಅವರು ಭ್ರಷ್ಟ ಅನ್ನೋ ಆರೋಪ ಮಾಡಿರುವ ಜ್ಯಾತ್ಯಾತೀತ ಜನತಾದಳ ಮುಖಂಡ ಶಿವಕುಮಾರ್ ನಾಟೀಕಾರ ಹೇಳಿಕೆ ಖಂಡಿಸುತ್ತೇವೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಪೂಜಾರಿ ಹೇಳಿದರು.

ಪಟ್ಟಣದ ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನ ಅಭಿವೃದ್ಧಿ ಬಗ್ಗೆ ವಿರೋಧ ಪಕ್ಷದ ಸ್ಥಾನದಲ್ಲಿರುವ ಪಕ್ಷದ ಮುಖಂಡರು ಮಾತನಾಡಲಿ. ಆದರೆ, ವೈಯಕ್ತಿಕವಾಗಿ ಭ್ರಷ್ಟ ಅನ್ನೋದು ನಿಂದನೆ ಮಾಡುವುದು ನಾವು ಸಹಿಸುವುದಿಲ್ಲ ಎಂದು ತಿಳಿಸಿದರು

ಎಪಿಎಂಸಿ ಅಧ್ಯಕ್ಷ ಮಂಜುನಾಥ ಅಂಜುಟಗಿ, ರಾಜ್ಯದ 224 ಶಾಸಕರು ಸಹ ನಮ್ಮ ಶಾಸಕರಾದ ಎಂ.ವೈ.ಪಾಟೀಲಅವರನ್ನುಗೌರವಿಸಿಮಾತನಾಡುತ್ತಾರೆ. ರಾಜಕೀಯದಲ್ಲಿ ಟೀಕೆ, ಟಿಪ್ಪಣಿಗಳು ಇರಬೇಕು. ಬೇರೆಯವರ ಮೇಲೆ ಆರೋಪ ಮಾಡುವವರ ಮುಂಚೆ ನಾವೆಷ್ಟೂ ಸ್ವಚ್ಛವಾಗಿ ಇದ್ದೇವೆ ಎಂದು ಅರಿತುಕೊಳ್ಳಲಿ ಎಂದು ನಾಟಿಕಾರ ಮನವರಿಕೆ ಮಾಡಿಕೊಳ್ಳಲಿ ತಿರುಗೇಟು ನೀಡಿದರು.

ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶರಣು ಕುಂಬಾರ ಮಾತನಾಡಿ, ನಾವು ಶಾಸಕರ ಕಟ್ಟಾ ಅನುಯಾಯಿಗಳು ಹೊರತು ಗುಲಾಮರಲ್ಲ ಅನ್ನೋದು ನಾಟೀಕಾರ ತಿಳಿದುಕೊಳ್ಳಲಿ. ತಾವು ಕೂಡಾ ರಾಜ್ಯ ಹಿಂದುಳಿದ ವರ್ಗಗಳ ಜೆಡಿಎಸ್ ರಾಜ್ಯ ಅಧ್ಯಕ್ಷರಾಗಿದ್ದೀರಿ ನೀವು ಕೂಡಾ ಕುಮಾರಸ್ವಾಮಿ ಗುಲಾಮರಗಿದ್ದೀರಿ ಎಂದು ನಾಟೀಕಾರ ಉತ್ತರ ನೀಡಲಿ. ಈ ಸಂದರ್ಭದಲ್ಲಿ ಶಿವಾನಂದ ಗಾಡಿಸಾಹುಕಾರ, ದತ್ತು ಬಂಡಗಾರ, ಚಂದ್ರಶೇಖರ್ ಕರಜಗಿ, ಸಿದ್ದು ಮಗಿ, ಶ್ರೀಶೈಲ ಪಾಟೀಲ, ಸಂತೋಷ ಮಣಮಿ, ವಿಶ್ವನಾಥ ಮಲಘಾಣ, ಮಲ್ಲಿಕಾರ್ಜುನ ವಾಳಿ, ಶರಣು ಈಶ್ವರಗೊಂಡ, ಆನಂದ ರಾಠೋಡ ಇದ್ದರು.

ಹಿರಿಯ ನಾಯಕರ ಬಗ್ಗೆ ಮಾತನಾಡಿದರೆ, ದೊಡ್ಡವರಾಗುತ್ತೀರಿ ಅನ್ನೋ ಭ್ರಮೆಯಲ್ಲಿ ಶಿವಕುಮಾರ್ ಇದ್ದಾರೆ. ವಿರೋಧ ಪಕ್ಷದ ಸ್ಥಾನಗಳಲ್ಲಿ ಇದ್ದವರು ಆಡಳಿತ ಪಕ್ಷಕ್ಕೆ ಅಭಿವೃದ್ಧಿ ವಿಷಯಗಳ ಬಗ್ಗೆ ಧ್ವನಿ ಎತ್ತಿದ್ದರೆ ಜನ ನಿಮಗೆ ಮೆಚ್ಚುತ್ತಾರೆ. ಆದರೆ, ವಯಕ್ತಿಕ ಟೀಕೆಗಳು ಮಾಡುತ್ತಾ ಕಾಲಹರಣ ಮಾಡಿದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ತಾಲೂಕಿನ ಪ್ರಜ್ಞಾವಂತ ಮತದಾರರು ತಕ್ಕ ಪಾಠ ಕಲಿಸುತ್ತಾರೆ.

# ಭಾವೈಕ್ಯತೆಗೆ ಮಾದರಿ ಬಳವಾಡದ ನದಾಪ ಕುಟುಂಬ



■ ಉದಯರಶ್ಮಿ ದಿನಪತ್ರಿಕೆ

ಅಥಣಿ: ಧರ್ಮ ಜಾತಿ ಭಾಷೆಗಳನ್ನು ಮೀರಿ ಪರಸ್ಪರ ಪ್ರೀತಿ ಸಹೋದರತ್ವ ಹಾಗೂ ಮಾನವೀಯತೆಯಿಂದ ಬದುಕುವುದೇ ಭಾರತೀಯ ಸಂಸ್ಕೃತಿಯ ವಿಶೇಷತೆ. ಇದಕ್ಕೆ ನೈಜ ಉದಾಹರಣೆಯಾಗಿ ಅಥಣಿ ತಾಲೂಕಿನ ಬಳವಾಡ ಗ್ರಾಮದ ರಸೂಲ ನದಾಪ ಹಾಗೂ ಜಾಪರಸಾಬ ನದಾಪ ಸಹೋದರರು ವಿಶೇಷ ಗಮನ ಸೆಳೆಯುತ್ತಿದ್ದಾರೆ.

ನದಾಪ ಕುಟುಂಬದವರು ಗ್ರಾಮದ ಹಿಂದೂ ಸಮುದಾಯದ ಜನರೊಂದಿಗೆ ಆತ್ಮೀಯ ಬಾಂಧವ್ಯ ಹೊಂದಿದ್ದಾರೆ. ಹಿಂದೂಗಳ ಹಬ್ಬ ಹರಿದಿನಗಳಲ್ಲಿ ಮುಂಚೂಣಿಯಲ್ಲಿ ಪಾಲ್ಗೊಳ್ಳುವ ಅವರು, ಹಿಂದೂ ಕುಟುಂಬಗಳ ಕಷ್ಟ ಸುಖಗಳಲ್ಲಿಯೂ ಸಹೋದರರಂತೆ ಜೊತೆಗೆ ಇರುತ್ತಾರೆ.

ಪವಿತ್ರಶ್ರಾವಣ ಮಾಸದಲ್ಲಿ ಡಾ.ವಿವೇಕಾನಂದ ಸ್ವಾಮೀಜಿಯವರು ಬಳವಾಡ ಗ್ರಾಮದ ಎಲ್ಲರ ಮನೆ ಮನೆಗೆ ತೆರಳಿ ಯುವ ಸಮುದಾಯ ದುಶ್ಚಟಗಳಿಗೆ ಬಲಿಯಾಗದಂತೆ ಪಾಲಕರಿಗೆ ಹಾಗೂ ಸಮಾಜದ ಗುರು ಹಿರಿಯರಿಗೆ ಜಾಗೃತಿ ಮೂಡಿಸುತ್ತಿರುವದನ್ನು ಕಂಡು ಸ್ವಾಮೀಜಿಯವರನ್ನು ತಮ್ಮ ಮನೆಗೆ ಆತ್ಮೀಯವಾಗಿ ಆಹ್ವಾನಿಸಿ ಸತ್ಕರಿಸಿ ಗೌರವಿಸಿರುವುದು ವಿಶೇಷ ಗಮನ ಸೆಳೆಯಿತು. ಸ್ವಾಮೀಜಿಯವರನ್ನು ಗೌರವದಿಂದ ಬರಮಾಡಿಕೊಂಡು ಆತಿಥ್ಯ ನೀಡಿದ ಸಹೋದರರಾದ ರಸೂಲ ನದಾಪ ಹಾಗೂ ಜಾಫರಸಾಬ ನದಾಪ ರ ನಡೆ ಹಿಂದೂ-ಮುಸ್ಲಿಂ ಭಾವೈಕ್ಯತೆಗೆ ಪರಸ್ಪರ ಗೌರವ ಮತ್ತು ಸೌಹಾರ್ದತೆಗೆ ಉತ್ತಮ ನಿದರ್ಶನವಾಗಿದೆ.

# ಚಡಚಣ ತಾಲೂಕು ಬರಪೀಡಿತ ಪಟ್ಟಿಗೆ ಸೇರಿಸಲು ಆಗ್ರಹ

■ ಉದಯರಶ್ಮಿ ದಿನಪತ್ರಿಕೆ



## ರೈತರ ಸಾಲ ಸಂಪೂರ್ಣ ಮನ್ನಾ ಹಾಗೂ ಮಧ್ಯಂತರ ಬೆಳೆ ವಿಮೆ ಪಾವತಿಗೆ ಆಗ್ರಹಿಸಿ ಮಾಜಿ ಶಾಸಕ ಡಾ. ದೇವಾನಂದ ಚವ್ಹಾಣ ಮನವಿ

ಚಡಚಣ: ಮುಂಗಾರು ಮಳೆ ಸಂಪೂರ್ಣ ಕೈಕೊಟ್ಟಿರುವ ಹಿನ್ನೆಲೆಯಲ್ಲಿ ಚಡಚಣ ತಾಲೂಕನ್ನು ತಕ್ಷಣ ಬರಪೀಡಿತ ತಾಲೂಕುಗಳ ಪಟ್ಟಿಗೆ ಸೇರಿಸಿ, ರೈತರಿಗೆ ಅಗತ್ಯ ಪರಿಹಾರ ಕಲ್ಪಿಸಬೇಕು ಎಂದು ನಾಗಠಾಣ ಮತಕ್ಷೇತ್ರದ ಮಾಜಿ ಶಾಸಕ ಡಾ. ದೇವಾನಂದ ಫೂ. ಚವ್ಹಾಣ ಆಗ್ರಹಿಸಿದ್ದಾರೆ.

ಈ ಕುರಿತು ಚಡಚಣ ತಹಶೀಲ್ದಾರರಿಗೆ ಬುಧವಾರ ಮನವಿ ಸಲ್ಲಿಸಿರುವ ಅವರು, ರಾಜ್ಯ ಸರ್ಕಾರ ಇತ್ತೀಚೆಗೆ ಬಿಡುಗಡೆಮಾಡಿರುವ ಬರಪೀಡಿತ ತಾಲೂಕುಗಳ ಪಟ್ಟಿಯಲ್ಲಿ ಚಡಚಣ ತಾಲೂಕು ಸೇರ್ಪಡೆಯಾಗದಿರುವುದು ರೈತರಲ್ಲಿ ತೀವ್ರ ಆತಂಕ ಹಾಗೂ ಅಸಮಾಧಾನ ಮೂಡಿಸಿದೆ ಈ ವರ್ಷ ಚಡಚಣ ತಾಲೂಕಿನಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗಿಲ್ಲ. ಮುಂಗಾರು ಸಂಪೂರ್ಣ ಕೈಕೊಟ್ಟ ಪರಿಣಾಮ ರೈತರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಭರವಸೆಯಿಂದ ಬಿತ್ತನೆ ಮಾಡಿದ ಬೆಳೆಗಳು ಮಳೆಯಿಲ್ಲದೆ ಹಾನಿಗೊಳಗಾಗಿವೆ. ಕೃಷಿ ಚಟುವಟಿಕೆಗಳಿಗಾಗಿ ಸಾಲ ಮಾಡಿಕೊಂಡಿರುವ ರೈತರು ಇದೀಗ ಸಾಲದ ಸುಳಿಯಲ್ಲಿ ಸಿಲುಕಿದ್ದು, ಸರ್ಕಾರದ ನೆರವಿನ ನಿರೀಕ್ಷೆಯಲ್ಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಇದರ ಜೊತೆಗೆ ಅಪೂರ್ಣವಾಗಿರುವ ಚಡಚಣ ಏತ ನೀರಾವರಿ ಯೋಜನೆಯನ್ನು ಶೀಘ್ರ ಪೂರ್ಣಗೊಳಿಸಬೇಕು. ಆಲಮಟ್ಟಿಯಿಂದ ಚಡಚಣ ಹಳ್ಳಕ್ಕೆ ನೀರು ಹರಿಸಿದರೆ ಅಂತರ್ಜಲ ಮಟ್ಟ ಹೆಚ್ಚುವುದರೊಂದಿಗೆ ತಾಲೂಕಿನ ಒಟ್ಟು ಎಂಟು ಬಾಂದಾರಗಳು ತುಂಬಲಿದ್ದು, ಮುಂದಿನ ದಿನಗಳಲ್ಲಿ ಜನರು ಹಾಗೂ ಜಾನುವಾರುಗಳಿಗೆ ನೀರಿನ ಸಮಸ್ಯೆ ಕಡಿಮೆಯಾಗಲಿದೆ ಎಂದು ಡಾ. ದೇವಾನಂದ ಚವ್ಹಾಣ ತಿಳಿಸಿದ್ದಾರೆ.

ರೈತ ಹಸಿರು ಸೇನೆ ತಾಲೂಕ ಅಧ್ಯಕ್ಷ ವಸಂತ ಬೈರಾಮಡಿ ಮಾತನಾಡಿ ತಾಲೂಕು ಆಡಳಿತ, ಹವಾಮಾನ ಇಲಾಖೆ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳು ವಾಸ್ತವ ಪರಿಸ್ಥಿತಿಯ ಕುರಿತು ಜಿಲ್ಲಾಡಳಿತ ಹಾಗೂ ರಾಜ್ಯ ಸರ್ಕಾರಕ್ಕೆ ಚಡಚಣ ತಾಲೂಕು ಹಾಗೂ ವಿಜಯಪುರ ಜಿಲ್ಲಾಡಳಿತ ಜಂಟಿಯಾಗಿ ತಾಲೂಕಿನಾದ್ಯಂತ ನೈಜ ಬರ ಪರಿಸ್ಥಿತಿ, ಮಳೆಯ ಕೊರತೆ, ಬೆಳೆ ಹಾನಿ, ರೈತರ ಆರ್ಥಿಕ ಸಂಕಷ್ಟ ಹಾಗೂ ಸಾಲದ ಸಮಸ್ಯೆಗಳ ಕುರಿತು ಸಮಗ್ರ ವರದಿ ಸಿದ್ಧಪಡಿಸಿ ಕೂಡಲೇ ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕು. ಮುಖ್ಯಮಂತ್ರಿ ಅವರ ಗಮನಕ್ಕೆ ತಂದು ಚಡಚಣ ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ರೈತರ ಸಂಕಷ್ಟಗಳಿಗೆ ಸ್ಪಂದಿಸುವುದಾಗಿ ಪದೇಪದೇ ಆಶ್ವಾಸನೆ ನೀಡುತ್ತಿರುವ ನಾಗಠಾಣ ಮತಕ್ಷೇತ್ರದ ಶಾಸಕ ವಿಠ್ಠಲ ಕಟಕಧೋಂಡ ಅವರು ಇದೀಗ ರೈತರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ವಿಫಲರಾಗಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ವಿಜಯಪುರ ಜಿಲ್ಲಾ ಉಪಾಧ್ಯಕ್ಷ ಮಹಾದೇವ ಬನಸೋಡೆ ಆರೋಪಿಸಿದ್ದಾರೆ.

'ರೈತರ ಪರವಾಗಿದ್ದೇವೆ, ರೈತರ ಸಮಸ್ಯೆಗಳಿಗೆ ಧ್ವನಿಯಾಗುತ್ತೇವೆ' ಎಂದು ಹೇಳುವುದು ಸುಲಭ. ಆದರೆ ರೈತರು ಸಂಕಷ್ಟದಲ್ಲಿರುವಾಗ ಅವರ ಪರವಾಗಿ ಸರ್ಕಾರದ ಮುಂದೆ ನಿಂತು ಪರಿಹಾರ ಕೊಡಿಸುವುದು ಮುಖ್ಯ. ವಿಠ್ಠಲ ಕಟಕಧೋಂಡ ಅವರು ಆಶ್ವಾಸನೆ ನೀಡುವುದರಲ್ಲೇ ಕಾಲ ಕಳೆಯುತ್ತಿದ್ದಾರೆ' ಎಂದು ಬನಸೋಡೆ ಟೀಕಿಸಿದ್ದಾರೆ.

ಪ್ರತಿ ಎಕರೆಗೆ ರೂ. 50 ಸಾವಿರ ಪರಿಹಾರ ನೀಡಬೇಕು, ರೈತರ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು, ಮಧ್ಯಂತರ ಬೆಳೆ ವಿಮೆ ಹಣವನ್ನು ಕೂಡಲೇ ಪಾವತಿಸಬೇಕು. ಅಗತ್ಯವಿರುವ ಪ್ರದೇಶಗಳಲ್ಲಿ ಮೇವು ಕೇಂದ್ರ ಹಾಗೂ ಗೋಶಾಲೆಗಳನ್ನು ಆರಂಭಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ತಕ್ಷಣ ಕ್ರಮ ಕೈಗೊಂಡು ಚಡಚಣ ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸದಿದ್ದರೆ,ಚಡಚಣ ತಹಶೀಲ್ದಾರ್ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಅವರು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ರೈತ ಮುಖಂಡ ಮಹಾದೇವ ಕರ್ಲಮಳ, ಸತೀಶ ಬಂಡಿ, ದೀಪಕ ಕದಮ, ಪ್ರವೀಣ ಪಾಟೀಲ, ಜೆಡಿಎಸ್ ಚಡಚಣ ತಾ.ಅಧ್ಯಕ್ಷ ದಯಾನಂದ ಕಸಮೂಳೆ, ಶಕೀಲ ಖಾಟೀಕ್, ಸೋಮು ಬಡಿಗೇರ, ಮುರುಗೇಶ ಸಿಂಪಿ,ರಾಮ ಮಾಲಾಪೂರ, ಚಂದ್ರಕಾಂತ ಕಲಮನಿ, ಅಶೋಕ ಜತ್ತಿ,ರಾಜಶೇಖರ ಪೂಜಾರಿ, ಹಣಮಂತ ಧೈಗೊಂಡ,ರುದ್ರೇಶ ಬನಸೋಡೆ, ಟೀಪು ಸುಲ್ತಾನ ಕಮೀಟಿ,ಕರ್ನಾಟಕ ರಕ್ಷಣಾ ವೇದಿಕೆ, ತಾಲೂಕಿನ ವಿವಿಧ ಸಂಘಟನೆಗಳ ರೈತ ಮುಖಂಡರು ಹಾಗೂ ರೈತರು ಅಪಾರ ಪ್ರಮಾಣದಲ್ಲಿ ಇದ್ದರು.

# ಗಾಳಿಯ ರಭಸಕ್ಕೆ ಕ್ರೀಡಾಕೂಟದ ಪೆಂಡಾಲ್ ಧರಾಶಾಯಿ!



■ ಉದಯರಶ್ಮಿ ದಿನಪತ್ರಿಕೆ

## ಅದೃಷ್ಟವಶಾತ್ ತಪ್ಪಿದ ಭಾರೀ ಅನಾಹುತ | ಮಕ್ಕಳ ಕ್ರೀಡಾಕೂಟದಲ್ಲಿ ಸುರಕ್ಷತಾ ವ್ಯವಸ್ಥೆ ಕುರಿತು ಪ್ರಶ್ನೆ

ಬಾಗಲಕೋಟೆ (ಜಮಖಂಡಿ): ನಗರದ ಪೋಲೊ ಮೈದಾನದಲ್ಲಿ ಶಾಲಾ ಮಕ್ಕಳ ಕ್ರೀಡಾಕೂಟ ನಡೆಯುತ್ತಿದ್ದ ಸಂದರ್ಭದಲ್ಲಿ ಏಕಾಏಕಿ ಬೀಸಿದ ಭಾರಿ ಗಾಳಿಗೆ ಅತಿಥಿಗಳು ಹಾಗೂ ನಿರ್ಣಾಯಕರಿಗಾಗಿ ಅಳವಡಿಸಲಾಗಿದ್ದ ತಾತ್ಕಾಲಿಕ ಪೆಂಡಾಲ್‌ವೊಂದು ಕಿತ್ತು ನೆಲಕ್ಕುರುಳಿದ ಘಟನೆ ಮಂಗಳವಾರ ಮಧ್ಯಾಹ್ನ ಸುಮಾರು 3 ಗಂಟೆ ವೇಳೆಗೆ ನಡೆದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಅಥವಾ ಗಂಭೀರ ಗಾಯ ಸಂಭವಿಸದೆ ಭಾರಿ ಅನಾಹುತವೊಂದು ಕೂದಲೆಳೆಯ ಅಂತರದಲ್ಲಿ ತಪ್ಪಿದೆ.

ನಗರದ ಪೋಲೊ ಮೈದಾನದಲ್ಲಿ ಹುನ್ನೂರು ವಲಯ ಮಟ್ಟದ ಪ್ರೌಢಶಾಲಾ ವಿಭಾಗದ ಕ್ರೀಡಾಕೂಟ ಆಯೋಜಿಸಲಾಗಿತ್ತು. ವಿವಿಧ ಶಾಲೆಗಳ ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಭಾಗವಹಿಸಿ, ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸುತ್ತಿದ್ದರು. ವಿದ್ಯಾರ್ಥಿಗಳು ಮೈದಾನದಲ್ಲಿ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿದ್ದರೆ, ಮತ್ತೊಂದೆಡೆ ಅತಿಥಿಗಳು, ಶಿಕ್ಷಕರು ಹಾಗೂ ಕ್ರೀಡಾಕೂಟದ ನಿರ್ಣಾಯಕರಿಗಾಗಿ ತಾತ್ಕಾಲಿಕ ಪೆಂಡಾಲ್ ಅಳವಡಿಸಿ ಕುಳಿತುಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು.

ಕ್ರೀಡಾಕೂಟ ನಿರಾತಂಕವಾಗಿ ನಡೆಯುತ್ತಿದ್ದ ವೇಳೆ ಮಧ್ಯಾಹ್ನದ ಹೊತ್ತಿಗೆ ಏಕಾಏಕಿ ಗಾಳಿಯ ರಭಸ ಹೆಚ್ಚಾಗಿದೆ. ಕ್ಷಣಾರ್ಧದಲ್ಲೇ ಗಾಳಿಯ ಹೊಡೆತಕ್ಕೆ ಪೆಂಡಾಲ್‌ನ ತಾತ್ಕಾಲಿಕ ರಚನೆ ಅಲುಗಾಡಿ, ಬಳಿಕ ಕಿತ್ತು ಬಂದು ಸಂಪೂರ್ಣವಾಗಿ ನೆಲಕ್ಕುರುಳಿದೆ. ಪೆಂಡಾಲ್ ಕುಸಿಯುತ್ತಿದ್ದಂತೆ ಸ್ಥಳದಲ್ಲಿದ್ದ ವಿದ್ಯಾರ್ಥಿಗಳು, ಶಿಕ್ಷಕರು, ಅತಿಥಿಗಳು ಹಾಗೂ ಸಾರ್ವಜನಿಕರು ಕೆಲಕಾಲ ಆತಂಕಕ್ಕೊಳಗಾದರು.

ಪೆಂಡಾಲ್ ಕುಸಿದ ವೇಳೆ ಅದರ ಕೆಳಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಇಲ್ಲದಿರುವುದು ದೊಡ್ಡ ಅದೃಷ್ಟವಾಗಿದ್ದು, ಇಲ್ಲದಿದ್ದರೆ ಹಲವು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಅಪಾಯಕ್ಕೆ ಸಿಲುಕುವ ಸಾಧ್ಯತೆಯಿತ್ತು. ಘಟನೆಯ ಬಳಿಕ ಕೆಲಕಾಲ ಮೈದಾನದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

### ಸಣ್ಣ ನಿರ್ಲಕ್ಷ್ಯ ದೊಡ್ಡ ಅಪಾಯದ ಎಚ್ಚರಿಕೆ

**ಶಾಲಾ ಮಕ್ಕಳ ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸಾರ್ವಜನಿಕ ಸಮಾರಂಭಗಳಲ್ಲಿ ನೂರಾರು ವಿದ್ಯಾರ್ಥಿಗಳು, ಶಿಕ್ಷಕರು, ಅಧಿಕಾರಿಗಳು, ಅತಿಥಿಗಳು ಮತ್ತು ಸಾರ್ವಜನಿಕರು ಪಾಲ್ಗೊಳ್ಳುತ್ತಾರೆ. ಇಂತಹ ಸಂದರ್ಭದಲ್ಲಿ ತಾತ್ಕಾಲಿಕ ಪೆಂಡಾಲ್, ವೇದಿಕೆ, ಬ್ಯಾರಿಕೇಡ್ ಸೇರಿದಂತೆ ಯಾವುದೇ ವ್ಯವಸ್ಥೆ ಅಳವಡಿಸುವಾಗ ಸುರಕ್ಷತಾ ಕ್ರಮಗಳಿಗೆ ಮೊದಲ ಆದ್ಯತೆ ನೀಡಬೇಕಾಗಿದೆ.**

**ವಿಶೇಷವಾಗಿ ಗಾಳಿ-ಮಳೆಯ ಮುನ್ಸೂಚನೆ ಇರುವ ಸಂದರ್ಭಗಳಲ್ಲಿ ಪೆಂಡಾಲ್‌ಗಳ ಕಂಬಗಳು ಹಾಗೂ ರಚನೆಗಳನ್ನು ಸಮರ್ಪಕವಾಗಿ ಭದ್ರಪಡಿಸಲಾಗಿದೆಯೇ ಎಂಬುದನ್ನು ಕಾರ್ಯಕ್ರಮ ಆರಂಭಕ್ಕೂ ಮುನ್ನ ಪರಿಶೀಲಿಸಬೇಕಾಗಿದೆ. ಇಲ್ಲವಾದರೆ ಸಣ್ಣದೊಂದು ನಿರ್ಲಕ್ಷ್ಯವೇ ದೊಡ್ಡ ಅನಾಹುತಕ್ಕೆ ಕಾರಣವಾಗುವ ಸಾಧ್ಯತೆಯಿದೆ ಎಂಬುದನ್ನು ಜಮಖಂಡಿಯ ಈ ಘಟನೆ ಮತ್ತೊಮ್ಮೆ ಎಚ್ಚರಿಸಿದೆ.**

# ಡಾ.ಅಂಬಲಿ ಗೆ ಐಪಿಎಫ್ ಕ್ಲಿನಿಕಲ್ ಲೀಡರ್‌ಶಿಪ್ ಅವಾರ್ಡ್

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ನಗರದ ಬಿ. ಎಲ್. ಡಿ. ಇ ಡೀಮ್ಡ್ ವಿಶ್ವವಿದ್ಯಾಲಯ, ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಹಾಗೂ ಸಂಶೋಧನ ಕೇಂದ್ರದ ಜೆರಿಯಾಟ್ರಿಕ್ಸ್ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಡಾ.ಆನಂದ ಅಂಬಲಿ ಅವರಿಗೆ ಐಪಿಎಫ್ ಕ್ಲಿನಿಕಲ್ ಲೀಡರ್‌ಶಿಪ್ ಅವಾರ್ಡ್-2026 ಪ್ರಶಸ್ತಿ ಲಭಿಸಿದೆ.

ಅವರು ವೈದ್ಯಕೀಯ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಗಮನಾರ್ಹ ಸೇವೆ ಹಾಗೂ ತಮ್ಮ ವಿಭಾಗದಲ್ಲಿ ತೋರಿದ ಅತ್ಯುತ್ತಮ ವೈದ್ಯಕೀಯ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.

ನವದೆಹಲಿಯಲ್ಲಿ ಆಗಸ್ಟ್ 29 ಮತ್ತು 30ರಂದು ನಡೆದ 8ನೇ ವಾರ್ಷಿಕ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ದೇಶದ ನಾನಾ ಭಾಗಗಳಿಂದ ತಮ್ಮ ತಮ್ಮ ವೈದ್ಯಕೀಯ ವಿಶೇಷ ವಿಭಾಗಗಳಲ್ಲಿ ಅತ್ಯುತ್ತಮ ವೈದ್ಯಕೀಯ ನಾಯಕತ್ವದ ಸಾಮರ್ಥ್ಯವನ್ನು ಹೊಂದಿರುವ ಒಟ್ಟು 30 ಮಂದಿ ವೈದ್ಯರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಅವರಲ್ಲಿ ಡಾ. ಆನಂದ ಪಿ. ಅಂಬಲಿ ಅವರು ಜೆರಿಯಾಟ್ರಿಕ್ಸ್ ವಿಭಾಗದಲ್ಲಿ ಸಲ್ಲಿಸುತ್ತಿರುವ ವೈದ್ಯಕೀಯ ಸೇವೆ, ವಯೋವೃದ್ಧರ ಆರೋಗ್ಯ ಆರೈಕೆಯಲ್ಲಿ ತೋರಿದ ನಾಯಕತ್ವ ಹಾಗೂ ವೈದ್ಯಕೀಯ ಶಿಕ್ಷಣ ಕ್ಷೇತ್ರಕ್ಕೆ ನೀಡುತ್ತಿರುವ ಕೊಡುಗೆಗಾಗಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಯಲ್ ಕಾಲೇಜ್ ಆಫ್ ಫಿಜಿಷಿಯನ್ಸ್ ಆಫ್ ಎಡಿನ್‌ಬರ್ಗ್ನ ಅಧ್ಯಕ್ಷ ಪ್ರೊ. ಮಾರ್ಕ್ ಸ್ಟ್ರಾಚನ್, ನವೀನ ವೈದ್ಯರ ವೇದಿಕೆಯ ಅಧ್ಯಕ್ಷ ಡಾ. ಜುಗಲ ಕಿಶೋರ ಶರ್ಮಾ ಅವರು ಡಾ. ಆನಂದ ಪಿ. ಅಂಬಲಿ ಅವರಿಗೆ ಪ್ರಶಸ್ತಿ ಪ್ರಮಾಣಪತ್ರ ಹಾಗೂ ಪದಕವನ್ನು ಪ್ರದಾನ ಮಾಡಿದರು.

ಡಾ. ಆನಂದ ಪಿ. ಅಂಬಲಿ ಅವರಿಗೆ ಲಭಿಸಿರುವ ಈ ಪ್ರತಿಷ್ಠಿತ ಪ್ರಶಸ್ತಿಯು ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯಕ್ಕೆ ಹೆಮ್ಮೆಯ ಸಂಗತಿಯಾಗಿದ್ದು, ಈ ಸಾಧನೆಗಾಗಿ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷ ಮತ್ತು ಸಚಿವ ಎಂ. ಬಿ. ಪಾಟೀಲ, ಕುಲಾಧಿಪತಿ ಬಿ. ಎಂ. ಪಾಟೀಲ, ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಕುಲಪತಿ, ಡಾ. ಅರುಣ ಚಂ. ಇನಾಮದಾರ, ಕುಲಸಚಿವ ಡಾ. ಆರ್. ವಿ. ಕುಲಕರ್ಣಿ, ವೈದ್ಯಕೀಯ ವಿಭಾಗದ ಡೀನ್ ಹಾಗೂ ಪ್ರಾಚಾರ್ಯ, ಡಾ. ತೇಜಸ್ವಿನಿ ವಲ್ಲಭ, ಹಿರಿಯ ಉಪಪ್ರಾಂಶುಪಾಲ ಡಾ. ವಿಜಯಕುಮಾರ ಕಲ್ಯಾಣಪ್ಪಗೋಳ, ವೈದ್ಯಕೀಯ ಅಧೀಕ್ಷಕ ಡಾ. ಎಸ್. ಎನ್. ಬೆಂಟೂರ ಸಂತಸ ವ್ಯಕ್ತಪಡಿಸಿದ್ದು, ಅಭಿನಂದನೆ ಸಲ್ಲಿಸಿದ್ದಾರೆ.

# ಶ್ರದ್ಧೆ ಮತ್ತು ಕಾಯಕನಿಷ್ಠೆಯಿಂದ ಉನ್ನತಿ ಸಾಧ್ಯ : ಬೆಳ್ಳುಬ್ಬಿ

■ ಉದಯರಶ್ಮಿ ದಿನಪತ್ರಿಕೆ



ಕೊಲ್ಹಾರ: ಧ್ಯೇಯ, ಶ್ರದ್ಧೆ ಹಾಗೂ ಕಾಯಕನಿಷ್ಠೆಯಿಂದ ಬದುಕಿದಾಗ ಮಾತ್ರ ಮನುಷ್ಯ ಉನ್ನತಿ ಸಾಧಿಸಲು ಸಾಧ್ಯ. ಈ ಮಹತ್ವದ ಸಂದೇಶವನ್ನು 'ಓ ಮನಸ್ಸೇ' ನಾಟಕ ಪರಿಣಾಮಕಾರಿಯಾಗಿ ಸಾರುತ್ತದೆ ಎಂದು ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ ಹೇಳಿದರು.

ಪಟ್ಟಣದ ವಿಶ್ವಭಾರತಿ ವಿದ್ಯಾವರ್ಧಕ ಸಂಸ್ಥೆಯ ಸಾಂಸ್ಕೃತಿಕ ಭವನದಲ್ಲಿ ಶ್ರೀ ದ್ಯಾಮವ್ವ ದೇವಿ ಕಲಾ ಬಳಗದ ವತಿಯಿಂದ ಸಾಣೇಹಳ್ಳಿ ಗ್ರಾಮರಂಗ ಸಾಂಸ್ಕೃತಿಕ ಟ್ರಸ್ಟ್‌ನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಓ ಮನಸ್ಸೇ' ಏಕವ್ಯಕ್ತಿ ರಂಗಪ್ರಯೋಗದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಾನಪದ ವಿಶ್ವಕೋಶ ಬಿ.ಆರ್. ಪೊಲೀಸ್‌ಪಾಟೀಲ ಮಾತನಾಡಿ, ನಾಟಕಗಳು ಸಮಾಜದ ಓರೆಕೋರೆಗಳನ್ನು ತಿದ್ದುವುದರ ಜತೆಗೆ ಸಾಮಾಜಿಕ ಪ್ರಜ್ಞೆ ಮೂಡಿಸುವ ತೆರೆದ ಪುಸ್ತಕಗಳಾಗಿವೆ. ಮೊಬೈಲ್ ವ್ಯಾಮೋಹದಿಂದ ಹೊರಬಂದು ರಂಗಭೂಮಿ, ಸಾಮಾಜಿಕ ನಾಟಕ ಹಾಗೂ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

55 ನಿಮಿಷಗಳ ನಾಟಕ ಪ್ರೇಕ್ಷಕರನ್ನು ಹಿಡಿದಿಟ್ಟಿತು. ಮಂಜುಳಾ ಸಾಣೇಹಳ್ಳಿ ಅವರ ಅಭಿನಯ ಹಾಗೂ ರವಿ ಬೆಳಗೆರೆ ಅವರ ಧ್ವನಿಮುದ್ರಿತ ಮಾತುಗಳು ಸಭಾಂಗಣದಲ್ಲಿ ವಿಶೇಷ ಅನುಭವ ಮೂಡಿಸಿದವು. ಪರಮಾನಂದ ತನಿಖೆದಾರ ಉದ್ಘಾಟಿಸಿದರು.

ಕಲ್ಲಪ್ಪ ಸಿ.ಸೊನ್ನದ, ಇಸ್ಮಾಯಿಲ್‌ಸಾಬ ತಹಶೀಲ್ದಾರ ಉಪಸ್ಥಿತರಿದ್ದರು. ಪರಶುರಾಮ ಬ.ಗಣಿ ಸ್ವಾಗತಿಸಿ ನಿರೂಪಿಸಿದರು. ವೈ.ಡಿ. ಬದಾಮಿ ಹಾಗೂ ಮಂಜುಳಾ ಬದಾಮಿ ಅಭಿನಯಿಸಿದರು.

# ಸಾರವಾಡದಲ್ಲಿ ಈಶ್ವರ-ಮಾರುತಿ ದೇವರ ಜಾತ್ರೆ ಇಂದಿನಿಂದ

■ ಉದಯರಶ್ಮಿ ದಿನಪತ್ರಿಕೆ





## ಭವ್ಯ ರಥೋತ್ಸವ, ಮನರಂಜನೆ, ವಿವಿಧ ಸ್ಪರ್ಧೆ, ವೈವಿಧ್ಯಮಯ ಕಾರ್ಯಕ್ರಮಗಳು

ವಿಜಯಪುರ: ಜಿಲ್ಲೆಯ ಬಬಲೇಶ್ವರ ತಾಲೂಕಿನ ಸುಕ್ಷೇತ್ರ ಸಾರವಾಡ ಗ್ರಾಮದಲ್ಲಿ ಶ್ರೀ ಈಶ್ವರ ಹಾಗೂ ಶ್ರೀ ಮಾರುತಿ ದೇವರ ಜಾತ್ರಾ ಮಹೋತ್ಸವವು ಪ್ರತೀ ವರ್ಷದಂತೆ ಈ ವರ್ಷವೂ ಇದೇ ಸೆಪ್ಟೆಂಬರ್ 3 ರಿಂದ ಐದು ದಿನಗಳವರೆಗೆ ಅತ್ಯಂತ ವೈಭವದಿಂದ ಜರುಗಲಿದೆ.

ಜಾತ್ರೆಯ ಅಂಗವಾಗಿ ಪಲ್ಲಕ್ಕಿ ಉತ್ಸವ, ರಥೋತ್ಸವ, ಅನ್ನಸಂತರ್ಪಣೆ, ಎತ್ತಿನಗಾಡಿ ಸ್ಪರ್ಧೆ, ಕುಸ್ತಿ, ಹೊನಲು ಬೆಳಕಿನ ಕಬಡ್ಡಿ, ಗೀಗಿ ಪದಗಳು, ಸಾಮಾಜಿಕ ನಾಟಕ, ರಸಮಂಜರಿ, ಬಯಲಾಟ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಸೆ.3ರಂದು ಶ್ರೀ ಮಾರುತಿ ದೇವರ ಉತ್ಸವ ಮೂರ್ತಿಯನ್ನು ಕುಲಕರ್ಣಿಯವರ ಮನೆಯಿಂದ ಪಲ್ಲಕ್ಕಿ ಹಾಗೂ ವಾದ್ಯಮೇಳಗಳೊಂದಿಗೆ ಶ್ರೀ ಮಾರುತಿ ದೇವಸ್ಥಾನಕ್ಕೆ ಕರೆತರಲಾಗುವುದು. ನಂತರ ಓಕಳಿ ಕಂಬ ನಿಲ್ಲಿಸುವುದರೊಂದಿಗೆ ಜಾತ್ರೆಗೆ ಚಾಲನೆ ದೊರೆಯಲಿದೆ. ಸಂಜೆ ಪಲ್ಲಕ್ಕಿ ಉತ್ಸವ ಹಾಗೂ ರಾತ್ರಿ 10.30ಕ್ಕೆ ಶ್ರೀ ಜೈಹನುಮಾನ ನಾಟ್ಯ ಸಂಘದಿಂದ ಮನರಂಜನಾ ಕಾರ್ಯಕ್ರಮ ನಡೆಯಲಿದೆ. ಇದೇ ದಿನ ರಾತ್ರಿ ಸ್ಥಳೀಯ ಬ್ರದರ್ ಗ್ರೂಪ್ ವತಿಯಿಂದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿಯನ್ನೂ ಆಯೋಜಿಸಲಾಗಿದೆ.

ಸೆ.4ರಂದು ಬೆಳಗ್ಗೆ ಹಾಗೂ ಸಂಜೆ ಪಲ್ಲಕ್ಕಿ ಉತ್ಸವ ಮತ್ತು ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆಯಲಿವೆ.

ಸೆ.5ರಂದು ಬೆಳಗ್ಗೆ ಹಾಗೂ ಸಂಜೆ ಪಲ್ಲಕ್ಕಿ ಉತ್ಸವ ನಡೆಯಲಿದೆ. ರಾತ್ರಿ 9ಕ್ಕೆ ಶ್ರೀ ಆದಿಶಕ್ತಿ ಗಜಾನನ ತರುಣ ಮಂಡಳಿ, ದ್ಯಾಮವ್ವಾಯಿ ಓಣಿ ನೇತೃತ್ವದಲ್ಲಿ ಉಪ್ಪಲದಿನ್ನಿಯ ಸ್ನೇಹಜೀವಿ ಕಲಾಬಳಗದಿಂದ ಅಣ್ಣನ ಕಣ್ಣೀರು ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ.

ಸೆ.6ರಂದು ಬೆಳಗ್ಗೆ 9ಕ್ಕೆ ಎತ್ತಿನಗಾಡಿ ಸ್ಪರ್ಧೆ, 10ಕ್ಕೆ ಶ್ರೀಮತಿ ವಿದ್ಯಾಶ್ರೀ ಮಸಬಿನಾಳ ಮತ್ತು ರಾಮದುರ್ಗ ತಾಲೂಕಿನ ಸುನಾಳದ ಮಗದುಮ್‌ಸಾಬ ಅವರಿಂದ ಗೀಗಿ ಪದಗಳ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 12ಕ್ಕೆ ನಂದಿಕೋಲು ಉತ್ಸವದೊಂದಿಗೆ ಶ್ರೀ ಈಶ್ವರ ದೇವಸ್ಥಾನಕ್ಕೆ ಹಿಟ್ಟಕ್ಕಿ ತರಲಾಗುವುದು. ಸಂಜೆ 4ಕ್ಕೆ ದದಾಮಟ್ಟಿ ಗ್ರಾಮದಿಂದ ರಥೋತ್ಸವದ ಹಗ್ಗವನ್ನು ವಾದ್ಯಮೇಳದೊಂದಿಗೆ ಮೆರವಣಿಗೆ ಮೂಲಕ ತರಲಾಗುವುದು. ಸಂಜೆ 6ಕ್ಕೆ ಸೊಕ್ಕೆ-ಜಗಳೂರಿನ ಶ್ರೀ ಸಾರಂಗಪಯ್ಯ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಪುರವಂತರ ಮೇಳದೊಂದಿಗೆ ಭವ್ಯ ರಥೋತ್ಸವ ಜರುಗಲಿದೆ. ಇದೇ ಸಂದರ್ಭದಲ್ಲಿ ಭಕ್ತರಿಗೆ ಅನ್ನಸಂತರ್ಪಣೆಯೂ ನಡೆಯಲಿದೆ.

ರಾತ್ರಿ 9ಕ್ಕೆ 2018-19ನೇ ಸಾಲಿನ ಎಸ್‌ಎಸ್‌ಎಲ್‌ಸಿ ಬ್ಯಾಚ್ ವಿದ್ಯಾರ್ಥಿಗಳ ಬಳಗದ ವತಿಯಿಂದ ಆರ್ಕೆಸ್ಟ್ರಾ (ರಸಮಂಜರಿ) ಕಾರ್ಯಕ್ರಮ ಆಯೋಜಿಸಲಾಗಿದೆ. ಸೆ.7ರಂದು ಬೆಳಗ್ಗೆ 9ಕ್ಕೆ ಕಲ್ಲು ಹಾಗೂ ಭಾರ ಎತ್ತುವ ಗ್ರಾಮೀಣ ಕ್ರೀಡಾ ಸ್ಪರ್ಧೆಗಳು ನಡೆಯಲಿವೆ. ಶ್ರೀ ಈಶ್ವರ ದೇವರ ಪಲ್ಲಕ್ಕಿಯು ಎಡಿ ಈಶ್ವರ ದೇವಸ್ಥಾನಕ್ಕೆ ತೆರಳಿ ಮರಳಿದ ಬಳಿಕ ಪಲ್ಲಕ್ಕಿ ಉತ್ಸವ ನಡೆಯಲಿದೆ. ಮಧ್ಯಾಹ್ನ ಶ್ರೀ ಮಾರುತಿ ದೇವರ ಓಕಳಿ ಕಾರ್ಯಕ್ರಮ ಜರುಗಲಿದೆ. ಸಂಜೆ 4ಕ್ಕೆ ಪ್ರಸಿದ್ಧ ಜಟ್ಟಿಗಳಿಂದ ಕುಸ್ತಿ ಪಂದ್ಯಾವಳಿ ನಡೆಯಲಿದೆ. ಸಂಜೆ 6ಕ್ಕೆ ಶ್ರೀ ಆದಿಶಕ್ತಿ ಗಜಾನನ ತರುಣ ಮಂಡಳಿ, ದ್ಯಾಮವ್ವಾಯಿ ಓಣಿ ನೇತೃತ್ವದಲ್ಲಿ ಉಪ್ಪಲದಿನ್ನಿಯ ಸ್ನೇಹಜೀವಿ ಕಲಾಬಳಗದಿಂದ 'ಮನೆ ಮಗಳು' ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ.

ರಾತ್ರಿ 10.30ಕ್ಕೆ ಶ್ರೀಮತಿ ಯಲ್ಲವ್ವಾ ಲೋಕಾಪುರ ತಂಡದ ಕಲಾವಿದರಿಂದ ಶ್ರೀಕೃಷ್ಣ ಪಾರಿಜಾತ ಬಯಲಾಟ ಪ್ರದರ್ಶನದೊಂದಿಗೆ ಐದು ದಿನಗಳ ಜಾತ್ರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತೆರೆ ಬೀಳಲಿದೆ.

### ಶ್ರಾವಣ ಮಾಸದ ಪ್ರವಚನ

**ಶ್ರಾವಣ ಮಾಸದ ನಿಮಿತ್ತ ಗ್ರಾಮದ ಶ್ರೀ ಈಶ್ವರ ದೇವಸ್ಥಾನದಲ್ಲಿ ಪ್ರತಿದಿನ ಸಂಜೆ 7 ರಿಂದ ರಾತ್ರಿ 9 ರವರೆಗೆ ಶ್ರೀ ಎಮ್ಮಿಗನೂರ ಜಡೆಯ ಸಿದ್ದೇಶ್ವರ ಜೀವನ ದರ್ಶನ ಕುರಿತು ಆಧ್ಯಾತ್ಮಿಕ ಪ್ರವಚನ ನಡೆಯುತ್ತಿದ್ದು, ಹಿರೂರಿನ ಜಯಸಿದ್ಧೇಶ್ವರ ಶಿವಾಚಾರ್ಯರು ಈ ಪ್ರವಚನ ಕಾರ್ಯಕ್ರಮ ನಡೆಸಿಕೊಡುತ್ತಿದ್ದಾರೆ.**

**ಜಾತ್ರೆಯ ಎಲ್ಲ ಧಾರ್ಮಿಕ ಕಾರ್ಯಕ್ರಮಗಳು ವೇದಮೂರ್ತಿ ಗುರುಪಾದಯ್ಯ ಸ. ಪೂಜಾರಿ ಹಾಗೂ ರಾಚಯ್ಯ ಗಂ. ಪೂಜಾರಿ ಅವರ ನೇತೃತ್ವದಲ್ಲಿ ನಡೆಯಲಿವೆ.**

**ಈ ಜಾತ್ರಾ ಮಹೋತ್ಸವದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀ ಈಶ್ವರ ಹಾಗೂ ಶ್ರೀ ಮಾರುತಿ ದೇವರ ಕೃಪೆಗೆ ಪಾತ್ರರಾಗಬೇಕೆಂದು ಸಾರವಾಡ ಗ್ರಾಮದ ಸದ್ಭಕ್ತ ಮಂಡಳಿ ಪ್ರಕಟಣೆಯಲ್ಲಿ ಕೋರಿದೆ.**

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR